**ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾಯನಮಃ ।**
**ಶ್ರೀಹನುಮದ್ಭೀಮ- ಸುಮಧ್ವಗುರುಭ್ಯೋನಮಃ । ಶ್ರೀವಾದಿರಾಜಗುರುಭ್ಯೋನಮಃ ।**
**ಶ್ರೀರಾಘವೇಂದ್ರತೀರ್ಥಗುರುಭ್ಯೋನಮಃ ॥**

**''ಶ್ರೀಮಧ್ವಸಿದ್ಧಾಂತ ಸಂಗ್ರಹ ಮತ್ತು ಶ್ರೀಹರಿಸರ್ವೋತ್ತಮತ್ವ ಸಮರ್ಥನ'' -**ಶ್ರೀರಾಯಪಾಳ್ಯ ರಾಘವೇಂದ್ರಾಚಾರ್ಯರು

ಶ್ರೀಮಹಿಳಾಮತಲ್ಲಿಕೆಯ ವಕ್ಷದಿ ಪೆತ್ತುತದಗ್ರಜಾತತದ್ ಧಾಮಸಖರ್ಗಳು ವಿಧುದಿನೇಶರನಕ್ಷಿಯೊಳಿಟ್ಟುನಿಜಪ್ರಿಯಾ ॥
ಧಾಮಜನಾದ ಬೊಮ್ಮಗಖಿಲಾಧಿಪತಿತ್ವವನಿತ್ತುಮಾನಿಪು। ದ್ದಾಮಗುಣಾಕರಂ ನೃಹರಿ ಮಾಡುಗೆ ಮಂಗಲವಂ ನಿರಂತರಂ॥
ಸಕಲಬುದ್ಧಿಜಯಾರ್ಯಮುಖಾಖಿಳಪ್ರಕಟಕೀರ್ತಿಗುರೂತ್ತಮರಂಘ್ರಿಯಂ।
ಸುಕೃತರಾಶಿವಿಧಾಯಕವಂ ಕರಂ ಭಕುತಿಯಿಂ ನೆರೆ ವಂದಿಪೆನಾಗಳುಂ॥
ಪ್ರತ್ಯಾಸತ್ತ್ಯೇಕ ಶುಭ್ರತಾಖಿಲಲೋಕಂ। ಸತ್ಯಧ್ಯಾನಯತೀಶಾಮರ್ತ್ಯಮಹೀಜವೆಮಗೆಸಗುಗೀಪ್ಸಿತ ಫಲವಂ॥
ಶ್ರೀಕಟ್ಟೇನರಸಿಂಹವರ್ಯಕರುಣಾಪ್ರಾಪ್ತಾಖಿಙ್ಞಾಗಮಂ
ಶ್ರೀಕೃಷ್ಣಾವನಿಪಾಲಶೇಖರಸಭಾಧರ್ಮಾಧಿಕಾರಾನ್ವಿತಂ।
ಸ್ವೀಕಾರಾರ್ಹವ ರಾಘವೇಂದ್ರವಿಬುಧಂ ಶ್ರೀಮಧ್ವಶಾಸ್ತ್ರೋದಿತಾ-
ಙ್ಞಾಕಾರಾನ್ವಿತತತ್ವಸನ್ನವಕವಂ ಸುವ್ಯಕ್ತವಂ ಮಾಡುವಂ॥

ಶ್ರೀಭಗವಂತನು ಸೃಜಿಸಿರುವ ಈ ಪ್ರಪಂಚದಲ್ಲಿ ಚೇತನವರ್ಗವು ಶ್ರೇಷ್ಠವೆಂಬುದು ಸರ್ವರಿಗೂ ಸಮ್ಮತವಾದ ವಿಷಯವು. ಭಗವಂತನ ಸೃಷ್ಟಿಯಲ್ಲಿ ಬಂದಿರುವ ಅಚೇತನವರ್ಗವು ಅಂದರೆ- ಭೂಮಿಯು, ಅದರಲ್ಲಿರುವ ವೃಕ್ಷಾದಿಗಳು, ಅವುಗಳ ಪುಷ್ಪಫಲಗಳು ಮೊದಲಾದವುಗಳೆಲ್ಲವೂ ಒದಗಿಸಿಕೊಡುವ ಸುಖಗಳನ್ನು ಅನುಭವಿಸಿ ಸುಖಗಳನ್ನು ಅನುಭವಿಸುವುದಕ್ಕೆ ಮುಖ್ಯಪಾತ್ರರಾಗಿರುವಂತೆ ಶ್ರೀಭಗವಂತನ ಸಂಕಲ್ಪಕ್ಕೆ ವಿಷಯರಾಗಿರುವುದರಿಂದ ಇಂತಹ ಶ್ರೇಷ್ಠತೆಯು ಚೇತನವರ್ಗಕ್ಕೆ ಬಂದಿರುವುದು. ಈ ರೀತಿಯಿಂದ ಅತ್ಯಂತ ಶ್ರೇಷ್ಠತೆಯನ್ನು ದಯಪಾಲಿಸಿರುವ ಭಗವಂತನ ಕೃಪಾಲುತ್ವವನ್ನು ತಿಳಿದು, ಆತನ ಮಾಹಾತ್ಮ್ಯೆಯನ್ನು ಚೆನ್ನಾಗಿ ಅರಿತು ಆತನನ್ನು ಭಜಿಸುತ್ತಾ ಬರುವ ಜನರಿಗೆ ದುಃಖಲೇಶವೂ ಇಲ್ಲದೆ ಶಾಶ್ವತಸುಖವನ್ನೇ ಅನುಭವಿಸುವುದಕ್ಕೆ ಸಾಧನೆಗಳನ್ನು ಮಾಡುವ ಬುದ್ಧಿಯನ್ನು, ಇಚ್ಛೆಯನ್ನು, ಪ್ರಯತ್ನವನ್ನೂ ಕೂಡ ಕೊಟ್ಟು ಭಗವಂತನು ರಕ್ಷಣೆಯನ್ನು ಮಾಡುತ್ತಾನೆಂದು ಆಸ್ತಿಕರು ಸರ್ವರೂ ಒಪ್ಪುವರು.

ಹೀಗಿರುವಲ್ಲಿ ಭಗವಂತನ ಸಂಕಲ್ಪಕ್ಕೆ ವಿರುದ್ಧವಾಗಿ ಕೆಲವರು, ಈಶ್ವರನು ಎಂದರೆ- ಸಮಸ್ತ ಪ್ರಪಂಚಕ್ಕೂ ಸೃಷ್ಟ್ಯಾದಿಗಳನ್ನು ಮಾಡಿ ಆಳುವ ಒಬ್ಬಾತನು ಇದ್ದಾನೋ ಇಲ್ಲವೋ ಎಂದು ಸಂದೇಹವನ್ನುಂಟಾಗಿಸಿರುವರು; ಮತ್ತು ಕೆಲವರು ಈಶ್ವರನು ಇಲ್ಲವೇ ಇಲ್ಲವೆಂದು ದೃಢಪಡಿಸಿಕೊಂಡು ಈಶ್ವರನ ಒಬ್ಬನಾಳ್ವಿಕೆಗೆ ಒಳಪಟ್ಟ ಪರಲೋಕವು ಅಂದರೆ-ಸ್ವರ್ಗನರಕಾದಿ ಸ್ಥಾನಗಳು, ಅಲ್ಲಿ ಆಗುವ ಸುಖದುಃಖಾದ್ಯನು-ಭವಗಳು ಈ ಅನುಭವವನ್ನು ಪಡೆವ ದೇಹಾತಿರಿಕ್ತನಾದ ಜೀವನೂ ಸಹ ಇಲ್ಲವೆಂದು ಅಭಿಪ್ರಾಯಪಡುವವರಾಗಿ ನಾನಾವಿಧದಲ್ಲಿರುವರು. ಈಶ್ವರನನ್ನು ಮಾತ್ರ ಒಪ್ಪದೇ ಸ್ವರ್ಗನರಕಾದಿ ಪರಲೋಕಸ್ಥಾನಗಳನ್ನೂ, ದೇಹಾತಿರಿಕ್ತ ಜೀವರನ್ನೂ ಸಹ ಒಪ್ಪಿ, ಪ್ರಕೃತಿಗೆ ಅಥವಾ ಕರ್ಮಗಳಿಗೆ ಸ್ವಾತಂತ್ರ್ಯವನ್ನು ಕೆಲವರು ಹೇಳುವರು.

ಈಶ್ವರನನ್ನು ಅಂಗೀಕರಿಸುವವರಲ್ಲಿಯೂ ಅನೇಕ ಭೇದಗಳಿವೆ. ಕೆಲವರು ಈಶ್ವರನಿಗೆ ನಾಮರೂಪಗುಣಕ್ರಿಯೆಗಳಿಲ್ಲವೆಂದು ಹೇಳುವರು. ಅವುಗಳಿದ್ದರೂನು ಪರಿಮಿತಗಳಾಗಿರುವವೇ ಹೊರತು ಅಪರಿಮಿತವಾಗಿಲ್ಲವೆಂದು ಮತ್ತು ಕೆಲವರು ಹೇಳುವರು. ನಾಮರೂಪ ಗುಣಕ್ರಿಯಾದಿಗಳೆಲ್ಲವೂ ಮಿಥ್ಯೆಯೆಂದೂ ಕೆಲವರು, ಭಿನ್ನಾಭಿನ್ನವೆಂದು ಕೆಲವರು, ಅತ್ಯಂತಭಿನ್ನವೆಂದು ಕೆಲವರು ಅಂಗೀಕರಿಸುವರು. ಈ ರೀತಿ ಯಲ್ಲಿ ನಾನಾವಿಧವಾಗಿ ವಿವಾದಗಳು ನೆಲೆಗೊಂಡಿರುತ್ತವೆ.

ಹೀಗಿರುವಲ್ಲಿ ವೇದವು ಪರಮಪ್ರಮಾಣವೆಂದು ಅಂಗೀಕರಿಸಿ, ವೇದದ ಅರ್ಥಗಳನ್ನು ಇತಿಹಾಸ, ಪುರಾಣಾದಿ ಸಹಾಯದಿಂದ ತಿಳಿಯುವುದು ಉತ್ತಮವೆಂದು ನಿರ್ಣಯಿಸಿ, ವಿಚಾರಮೂಲಕವಾಗಿ ವೇದಾರ್ಥಭೂತವಾದ ತತ್ವಗಳ ವ್ಯವಸ್ಥೆಯನ್ನು ಮಾಡುತ್ತಾ ಬಂದ ಜನರಿಗೆ ಆಸ್ತಿಕರೆಂದು

ಹೆಸರು, ವೇದಪ್ರಾಮಾಣ್ಯವನ್ನು ಒಪ್ಪದೇ ಸ್ವತಂತ್ರವಾಗಿ ವಿಷಯವ್ಯವಸ್ಥೆಗಳನ್ನು ಮಾಡುವವರಿಗೆ ನಾಸ್ತಿಕರೆಂದು ಹೆಸರೂ ಸಹ ಬಂದಿರುವುದು.

ಆಸ್ತಿಕರಲ್ಲಿಯೂ ಅನೇಕ ಭೇದಗಳಿವೆ. ಆಸ್ತಿಕರೆಲ್ಲರೂ ವೇದವನ್ನು ಅದಕ್ಕನುಸಾರಿಯಾದ ಪುರಾಣೇತಿಹಾಸಾದಿಗಳನ್ನು ಅವಲಂಬಿಸಿ ತತ್ವನಿರ್ಣಯಮಾಡಿಕೊಳ್ಳುವುದಕ್ಕೆ ತಕ್ಕ ಮಾರ್ಗವನ್ನು ತಿಳಿಸುವ ಶಾಸ್ತ್ರಕ್ಕೆ ಮೀಮಾಂಸಾಶಾಸ್ತ್ರವೆಂದು ಹೆಸರು ಬಂದಿದೆ. ಅಂತಹ ಮೀಮಾಂಸಾಶಾಸ್ತ್ರವು, ಕರ್ಮಮೀಮಾಂಸಾಶಾಸ್ತ್ರವು, ಬ್ರಹ್ಮಮೀಮಾಂಸಾಶಾಸ್ತ್ರವು ಎಂದು ಎರಡು ವಿಧವುಳ್ಳದ್ದಾಗಿರುತ್ತದೆ. ಕರ್ಮಮೀಮಾಂಸಾ ಶಾಸ್ತ್ರದ ಸೂತ್ರಗಳು ಶ್ರೀಮದ್ ಬಾದರಾಯಣರ ಶಿಷ್ಯರಾದ ಶ್ರೀಜೈಮಿನಿಮಹಾಮುನಿಗಳಿಂದ ರಚಿತಸಲ್ಪಟ್ಟಿರುವುವು. ಬ್ರಹ್ಮಸೂತ್ರಗಳೆಂದು ಕರೆಯಲ್ಪಡುವ ಬ್ರಹ್ಮಮೀಮಾಂಸಾಶಾಸ್ತ್ರದ ಸೂತ್ರಗಳಾದರೂ ಶ್ರೀಬಾದರಾಯಣರಿಂದೇ ಸಾಕ್ಷಾತ್ತಾಗಿ ರಚಿಸಲ್ಪಟ್ಟಿರುವುವು. ಮೋಕ್ಷಕ್ಕೆ ಮುಖ್ಯ ಸಾಧನವು ಬ್ರಹಜ್ಞಾನವು ಎಂಬ ಅಭಿಪ್ರಾಯದಿಂದ ಬ್ರಹ್ಮಸ್ವರೂಪವನ್ನು ಸಪರಿಕರವಾಗಿ ತಿಳಿಸುವುದಕ್ಕಾಗಿ ಈ ಶಾಸ್ತ್ರವು ಪ್ರವರ್ತಿಸಿರುವುದು.

ಈ ಬ್ರಹ್ಮಸೂತ್ರಗಳಿಗೆ ಅನೇಕಜನರು ತಮ್ಮತಮ್ಮಸಿದ್ಧಾಂತಗಳನ್ನು ಅನುಸರಿಸಿ ವ್ಯಾಖ್ಯಾನರೂಪವಾದ ಭಾಷ್ಯಗಳನ್ನು ಮಾಡಿರುವರು. ಅವುಗಳಲ್ಲಿ ಈಗ ಅಧಿಕಪ್ರಚಾರದಲ್ಲಿರುವ ಭಾಷ್ಯಗಳು ಮೂರು. ಶಂಕರಾಚಾರ್ಯರಿಂದ ಅದ್ವೈತಸ್ಥಾಪನಪರವಾಗಿ ರಚಿಸಲ್ಪಟ್ಟಿರುವುದೊಂದು, ರಾಮಾನುಜಾಚಾರ್ಯರಿಂದ ವಿಶಿಷ್ಟಾದ್ವೈತ ಸ್ಥಾಪನಪರವಾಗಿ ರಚಿಸಲ್ಪಟ್ಟಿರುವ ಭಾಷ್ಯವು ಒಂದು, ಶ್ರೀಮಧ್ವಾಚಾರ್ಯರಿಂದ ದ್ವೈತಸ್ಥಾಪನ ಪರವಾಗಿ ರಚಿಸಲ್ಪಟ್ಟಿರುವ ಭಾಷ್ಯವು ಒಂದು. ಮೇಲೆ ಹೇಳಿದ ಭಾಷ್ಯಗಳ ಸಿದ್ಧಾಂತಗಳಿಗೆ ಕ್ರಮವಾಗಿ ಅದ್ವೈತಸಿದ್ಧಾಂತವೂ, ವಿಶಿಷ್ಟಾದ್ವೈತ-ಸಿದ್ಧಾಂತವೂ, ದ್ವೈತಸಿದ್ಧಾಂತವೂ ಎಂದು ಹೆಸರುಗಳು ಬಂದಿರುವುವು. ಅದ್ವೈತವಿಶಿಷ್ಟದ್ವೈತಸಿದ್ಧಾಂತಗಳನ್ನು ತತ್ತನ್ಮತೀಯರು ಪ್ರಚಾರ-ಪಡಿಸುತ್ತಾ ಇರುವುದು ಸರಿಯಷ್ಟೆ. ಅದೇ ರೀತಿಯಾಗಿ ದ್ವೈತಸಿದ್ಧಾಂತಪ್ರಚಾರವನ್ನಪೇಕ್ಷಿಸುವ ಜನಗಳು, ಸಿದ್ಧಾಂತಗ್ರಂಥಗಳು ಎಲ್ಲವೂ ಪ್ರೌಢ ಸಂಸ್ಕೃತಭಾಷೆಯಲ್ಲಿರುವುದರಿಂದ ಸಾಮಾನ್ಯವಾಗಿ ಲೌಕಿಕ ವ್ಯಾಸಂಗದಲ್ಲಿದ್ದು ಸಂಸ್ಕೃತಭಾಷಾಭ್ಯಾಸ ಮಾಡಲು ಅವಕಾಶವಿಲ್ಲದ ಜಿಜ್ಞಾಸು ಜನಗಳಿಗೆ ಸಿದ್ಧಾಂತತತ್ವಗಳನ್ನು ಸುಲಭವಾಗಿ ಕನ್ನಡ ಮೊದಲಾದ ದೇಶಭಾಷೆಗಳಿಂದ ತಿಳಿಸಿಕೊಡಬೇಕೆಂದು ಅಲ್ಲಲ್ಲಿರುವ ಪಂಡಿತರನ್ನು ಪ್ರಾರ್ಥಿಸಿಕೊಳ್ಳುತ್ತಾ ಇರುವರು. ಅನೇಕಾನುಪಪತ್ತಿಗಳಿಂದ ಅಂತಹಪ್ರಾರ್ಥನೆಗಳ ಫಲವು ಕೈಗೂಡದೇ ಹೋಗಿರುವುದನ್ನು ತಮ್ಮ ದಿವ್ಯಚಿತ್ತ-ದಿಂದ ಪರ್ಯಾಲೋಚಿಸಿ, ಶ್ರೀಮತ್ಪರಮಹಂಸೇತ್ಯಾದಿ ಸಮಸ್ತಬಿರುದಭೂಷಿತರಾದ ಶ್ರೀಮದುತ್ತರಾದಿಮಠಾಧೀಶರಾದ ಶ್ರೀಮತ್ಸತ್ಯಧ್ಯಾನ-ತೀರ್ಥ ಶ್ರೀಪಾದವರ್ಯರು ಪ್ರಕೃತದಲ್ಲಿ ಕನ್ನಡಭಾಷೆಯಿಂದ ಶ್ರೀಮನ್ಮಧ್ವಸಿದ್ಧಾಂತ ಪ್ರಮೇಯಗಳನ್ನು ವಿಶದವಾಗಿ ತಿಳಿಸುವ ಸಣ್ಣಸಣ್ಣ ಗ್ರಂಥಗಳನ್ನು ರಚಿಸಿ ಪ್ರಚುರಪಡಿಸುವಂತೆ ನಮಗೆ ಅಪ್ಪಣೆಯನ್ನು ದಯಪಾಲಿಸಿರುವರು.

ಮೇಲೆ ಹೇಳಿದಂತೆ ಶ್ರೀಮನ್ಮಹನೀಯರಾದ ಶ್ರೀಶ್ರೀಗಳವರ ಪರಮಾನುಗ್ರಹಬಲದಿಂದ ಈ ಕಾರ್ಯವನ್ನು ಪ್ರಾರಂಭಿಸಿರುವೆವು. ಶ್ರೀಮನ್ಮಧ್ವಸಿದ್ಧಾಂತದ ಪ್ರಮೇಯಗಳು ಶ್ರೀವ್ಯಾಸರಾಜರಿಂದ ರಚಿತವಾಗಿ ಹೇಳಲ್ಪಡುವ:-

''ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ವತೋ ಭೇದೋ ಜೀವಗಣಾಹರೇರನುಚರಾ ನೀಚೋಚ್ಚಭಾವಂಗತಾಃ।

ಮುಕ್ತಿರ್ನೈಜಸುಖಾನುಭೂತಿರಮಲಾಭಕ್ತಿಶ್ಚತತ್ಸಾಧನಂ ಹ್ಯಕ್ಷಾದಿತ್ರಿತಯಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥'' ಎಂಬ ಶ್ಲೋಕದಿಂದ ಸಂಗ್ರಹಿಸಲ್ಪಟ್ಟಿದೆ. ಅವು ಯಾವುವೆಂದರೆ :- 1.ಹರಿಸರ್ವೋತ್ತಮತ್ವವು; 2.ಜಗತ್ಸತ್ಯತ್ವವು, 3.ಭೇದಸತ್ಯತ್ವವೂ, 4.ಜೀವಪಾರ- ತಂತ್ರ್ಯವೂ , 5.ಜೀವತಾರತಮ್ಯವೂ; 6.ಮೋಕ್ಷಕ್ಕೆ ಪರಮಾನಂದಾನುಭವರೂಪತ್ವವೂ ; 7.ಭಕ್ತಿಗೆ ಮೋಕ್ಷಸಾಧನತ್ವವೂ; 8.ಪ್ರತ್ಯಕ್ಷ , ಅನು- ಮಾನ, ಆಗಮವೆಂದು ಪ್ರಮಾಣತ್ರೈವಿಧ್ಯವೂ, 9.ಹರಿಗೆ ಸರ್ವವೇದಮುಖ್ಯತಾತ್ಪರ್ಯವಿಷಯತ್ವವೂ ಎಂದು ಮುಖ್ಯವಾಗಿ ಒಂಭತ್ತಾಗಿರು- ವುವು. ಇವುಗಳಲ್ಲಿ ಮೊದಲನೆಯದಾದ ಹರಿಸರ್ವೋತ್ತಮತ್ವವು ಸಪ್ರಮಾಣವಾಗಿ ಈ ಗ್ರಂಥದಲ್ಲಿ ನಿರೂಪಿಸಲ್ಪಡುವುದು.

ಹರಿಯು ಸರ್ವೋತ್ತಮನೆಂದು ನಿಶ್ಚಯಿಸಬೇಕಾದರೆ, ತಕ್ಕಪ್ರಮಾಣಗಳು ಅವಶ್ಯವಾಗಿ ಆ ವಿಷಯದಲ್ಲಿ ಬೇಕಾಗುತ್ತವೆ. ಪ್ರಮಾಣಗಳು ಎಂದರೆ ಪ್ರತ್ಯಕ್ಷವು, ತನ್ಮೂಲಕವಾದ ಅನುಮಾನವು ಇಂತಹ ವಿಷಯಗಳಲ್ಲಿ ಪ್ರವರ್ತಿಸಲು ಸಮರ್ಥವಾಗಿರುವುದಿಲ್ಲ, ಆಗಮವೆಂದರೆ ವೇದವು ವೇದಾನುಕೂಲವಾದ ಪುರಾಣಾದಿಗಳು ಮಾತ್ರ ಇಂಥಹ ವಿಷಯಗಳನ್ನು ವಿಚಾರಮಾಡತಕ್ಕವರಿಗೆ ನಿರ್ಣಾಯಕಗಳಾಗಿ ಉದಾಹರಣಕ್ಕೆ ಅರ್ಹಗಳಾಗಿರುತ್ತವೆ. ವೇದಪುರಾಣಾದಿಬಲದಿಂದಲೂ, 'ಅಸ್ವತಂತ್ರರೂ, ಅಲ್ಪಶಕ್ತಿಗಳೂ, ಅಲ್ಪಜ್ಞರೂ, ಆದ ಚೇತನರಿಗೂ, ಮತ್ತು ಅಚೇತನ ಗಳಿಗೂ, ಸ್ವತಂತ್ರನೂ, ಪೂರ್ಣಶಕ್ತಿಯು, ಸರ್ವಜ್ಞನೂ, ಆದ ಚೇತನನೊಬ್ಬನು ಪ್ರವೃತ್ತ್ಯಾದಿಗಳಲ್ಲಿ ನಿಯಾಮಕನಾಗಿರಬೇಕಾದುದು ಅವಶ್ಯಕವು'

ಎಂಬುದೇ ಮೊದಲಾದ ಅನುಮಾನಗಳ ಬಲದಿಂದಲೂ ಸಾಮಾನ್ಯವಾಗಿ ಈಶ್ವರನೊಬ್ಬನಿದ್ದಾನೆ ಎಂಬುದು ಆಸ್ತಿಕರು ಸರ್ವರೂ ಒಪ್ಪಿರುವ ವಿಷಯವಾದಕಾರಣ ಈ ವಿಷಯವನ್ನು ನಾವಿಲ್ಲಿ ಸವಿಸ್ತಾರವಾಗಿ ವಿಚಾರಮಾಡುವುದಕ್ಕೆ ಅವಶ್ಯಕತೆ ಇರುವುದಿಲ್ಲ.

ಪ್ರಕೃತ, ಸರ್ವೋತ್ತಮನೆನಿಸಿಕೊಳ್ಳುವ ವಸ್ತುವು ಈಶ್ವರನೇ ಹೊರತು ಮತ್ತು ಬೇರೆ ಅಲ್ಲ. ಹರಿಯು ಸರ್ವೋತ್ತಮನೆಂದು ಹೇಳ-ಬೇಕಾದರೆ ಹರಿಯೇ ಜಗತ್ತಿಗೆ ಸರ್ವಸ್ವತಂತ್ರನಾಗಿ ನಿಯಮನಮಾಡುವ ಪೂರ್ಣಶಕ್ತಿಯು ಸರ್ವಜ್ಞನು ಆದ ಈಶ್ವರನೆಂದು ಹೇಳಬೇಕಾಗುವುದು ಇಂತಹ ಸರ್ವೋತ್ತಮತ್ವವನ್ನು ಕೆಲವರು ಶಿವನಿಗೂ, ಕೆಲವರು ಬ್ರಹ್ಮನಿಗೂ, ಕೆಲವರು ಗಣಪತಿಗೂ, ಕೆಲವರು ಸೂರ್ಯನಿಗೂ, ಕೆಲವರು ಶಕ್ತಿಗೂ, ಇನ್ನು ಕೆಲವರು ಅನೇಕವಿಧವಾಗಿಯೂ ಹೇಳುವರು. ಹೀಗಿರುವಲ್ಲಿ ಹರಿಯೇ ಸರ್ವೋತ್ತಮನೆಂದು ಹೇಗೆ ಒಪ್ಪಲಾಗುವುದೆಂದರೆ, ಪ್ರಮಾಣಬಲದಿಂದ ವಿಚಾರ ಮಾಡಲಾಗಿ ಯಾರು ಮೇಲೆ ಹೇಳಿದಂತವರಾಗಿ ಸಿದ್ಧಿಸುವರೋ ಅವರಿಗೆ ಸರ್ವೋತ್ತಮತ್ವವನ್ನು ಹೇಳುವುದು ಉಚಿತವು. ಆದುದರಿಂದ ವಿಚಾರವು ಆವಶ್ಯಕವು.

ಯಾರು ಸರ್ವಗುಣಗಳಿಂದಲೂ ಪೂರ್ಣರಾಗಿ ಸ್ವಲ್ಪಮಾತ್ರವೂ ದೋಷವಿಲ್ಲದವರೋ ಅವರು ಸರ್ವೋತ್ತಮರೆಂದೆನಿಸಿಕೊಳ್ಳಬಹುದು ಅವರಿಗಿಂತಲೂ ಈ ರೀತಿಯಾಗಿ ಮತ್ತೊಬ್ಬರು ಅಧಿಕರು ಅಥವಾ ಸಮರು ಇದ್ದರೆ ಅವರಿಗೆ ಸರ್ವೋತ್ತಮತ್ವವು ಬರಲಾರದು. ಆದುದರಿಂದ ಹರಿಗಾಗಲಿ, ಶಿವನಾಗಲಿ, ಮತ್ತೊಬ್ಬದೇವತೆಗಾಗಲೀ, ಒಬ್ಬಗೇ ಸರ್ವೋತ್ತಮತ್ವವು, ಅಂದರೆ ಈಶ್ವರತ್ವವು ಹೇಳಲರ್ಹವೇ ಹೊರತು ಅನೇಕರಿಗೆ ಕೂಡುವುದಿಲ್ಲ. ಶ್ರುತಿಪುರಾಣಾದಿಗಳನ್ನು ಚೆನ್ನಾಗಿ ವಿಚಾರಮಾಡಿ ನೋಡುವುದರಲ್ಲಿ ಹರಿಯು ಸಕಲಗುಣಪೂರ್ಣನೆಂತಲೂ, ಇತರ ದೇವತೆಗಳು ಅಂದರೆ ಬ್ರಹ್ಮಶಿವಾದಿಗಳು ಆತನಿಗಿಂತಲೂ ಗುಣಗಳವಿಷಯದಲ್ಲಿ ನ್ಯೂನರೆಂತಲೂ, ಮತ್ತು ದೋಷಯುಕ್ತರೆಂತಲೂ ಸ್ಪಷ್ಟವಾಗುತ್ತದೆ.

ಋಗ್ವೇದ2ನೇಅಷ್ಟಕ, 2ನೇ ಅಧ್ಯಾಯ, 24ನೇ ವರ್ಗ 1ನೇ ಋಕ್ ಭೂಮಿಯಲ್ಲಿರುವ ರಜಸ್ಸನ್ನು ಸಮಗ್ರವಾಗಿ ಎಣಿಸಲು ಸಮರ್ಥನಾದ ಪುರುಷನು ಕೂಡ ಶ್ರೀವಿಷ್ಣುವಿನವೀರ್ಯದ ಗಣನೆಯನ್ನು ಮಾಡಲು ಸಮರ್ಥನಲ್ಲವೆಂದು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ.

ಋ. ಅ-5. ಅ-6. ವ-24ರಲ್ಲಿ 1-2ನೇ ಋಕ್ಕುಗಳು ವಿಷ್ಣುವೇ ಗುಣಪೂರ್ಣನೆಂತಲೂ, ವಿಷ್ಣುವಿನ ಮಹಿಮೆಯನ್ನು ಕಾಲತ್ರಯದಲ್ಲಿರುವ ಪುರುಷರು ಯಾರೂ ಹೊಂದಲಾರರು. ಮತ್ತು ಅದರ ಕೊನೆಯನ್ನು ಕಾಣಲಾರರೆಂದೂ ಹೇಳುತ್ತದೆ.

ಯಾವೊಂದು ಶ್ರುತಿಯಾದರೂ ವಿಷ್ಣುವಿನಲ್ಲಿ ದೋಷವನ್ನು ಹೇಳುವುದಿಲ್ಲ. ಇತರದೇವತೆಗಳಲ್ಲಿ ಆದರೋ ಗುಣಗಳು ಪರಿಮಿತ-ಗಳೆಂತಲೂ, ಮತ್ತು ದೋಷಗಳಿವೆಯೆಂತಲೂ ಹೇಳುತ್ತವೆ.

ಋ. ಅ-8. ಅ-7. ವ-4ರಲ್ಲಿ 10ನೇಯ ಶ್ರುತಿಯು ಪ್ರಜಾಪತಿ ಶಬ್ದದಿಂದ ಬ್ರಹ್ಮನನ್ನು ಸಂಬೋಧಿಸಿ ನಿನ್ನ ಹೊರತು ಮತ್ತು ಯಾರೂನು ಜಾತಗಳು ಅಂದರೆ ಉತ್ಪತ್ತಿಯುಳ್ಳವುಗಳಾದ ವಸ್ತುಗಳನ್ನು ನಿಯಮಿಸುವವರು ಇಲ್ಲವೆಂದು ಪ್ರತಿಪಾದಿಸುತ್ತದೆ. ಇದರಿಂದ ಬ್ರಹ್ಮನ ಅಧಿಕಾರಕ್ಕೆ ಉತ್ಪನ್ನವಸ್ತುಮಾತ್ರವಿಷಯಕತ್ವರೂಪವಾದ ಅವಧಿಯು ಉಕ್ತವಾಯಿತು. ಈ ಅಭಿಪ್ರಾಯವಿಲ್ಲದ ಪಕ್ಷದಲ್ಲಿ ಶ್ರುತಿಸ್ಥವಾದ ಜಾತಪದವು ವ್ಯರ್ಥವಾಗುವುದು.

ಅಲ್ಲದೇ ಬೃ. ಉ. ಅ1. ಬ್ರಾ.14. ವಾ-2ರಲ್ಲಿ ಭಯವು, 3ರಲ್ಲಿ ಅರತಿಯು ಬ್ರಹ್ಮನಿಗೆ ಉಕ್ತವಾಗಿದೆ.

ಮತ್ತು ನಾರಾಯಣೋಪನಿಷತ್ತು ಮೊದಲಾದುದರಲ್ಲಿ ಸೃಷ್ಟಿಗೆ ಪೂರ್ವದಲ್ಲಿ ನಾರಾಯಣನೆಂಬ ವಿಷ್ಣುವು ಒಬ್ಬನೇ ಇದ್ದನೆಂತಲೂ, ಬ್ರಹ್ಮನು ರುದ್ರನೂ ಕೂಡ ಇರಲಿಲ್ಲವೆಂತಲೂ ಹೇಳಲ್ಪಟ್ಟಿದೆ.

ಋ. ಅ-2. ಅ-8. ವ-3ರಲ್ಲಿ 9ನೇಯ ವಾಕ್ಯದಲ್ಲಿ ರುದ್ರೇಂದ್ರವರುಣಮಿತ್ರಾರ್ಯಮರು ಮತ್ತು ಶತ್ರುಗಳಾದ ದೈತ್ಯರೂ ಕೂಡ ವಿಷ್ಣುವಿನ ವ್ರತಗಳನ್ನು ಅಂದರೆ ಜಗತ್ಸೃಷ್ಟ್ಯಾದಿ ಕಾರ್ಯಗಳನ್ನು ಅರಿಯರೆಂದು ರುದ್ರಾದಿಗಳಲ್ಲಿ ಅಜ್ಞಾನಾದಿ ದೋಷಗಳು ಉಕ್ತಗಳಾಗಿವೆ.

ಋ. ಅ-5. ಅ-4. ವ-7ರ 5ನೇಯ ಋಗ್ವಚನವು ವಿಷ್ಣುವಿನ ಆರಾಧನೆಯಿಂದ ರುದ್ರನಿಗೆ ರುದ್ರಪದ ಪ್ರಾಪ್ತಿಯಾಯಿತೆಂದು ಹೇಳುವುದು.

ಋ. ಅ-5. ಅ-3. ವ-3ರ 5ನೇ ಋಕ್ಕಿನಲ್ಲಿ ಶಿಶ್ನದೇವರು ಅಂದರೆ ಲಿಂಗಮೂರ್ತಿಯಾದ ರುದ್ರನಲ್ಲಿ ಅಜ್ಞಾನವನ್ನು ಹೇಳುತ್ತದೆ.

ಋ. ಅ-8. ಅ-5-ವ-14ರ ಮೂರನೇಯ ಋಕ್ಕಿನಲ್ಲಿ ರುದ್ರನಿಗೆ ಹನನಕರ್ಮತ್ವವು ಉಕ್ತವಾಗಿದೆ.

ಮತ್ತು ಋ.ಅ-8.ಅ-7.ವ-11 ಮತ್ತು 12ಗಳಿಗೆ 'ಅಂಭ್ರಣೀ ಸೂಕ್ತ'ವೆಂದು ಹೆಸರು ಪ್ರಸಿದ್ಧವಾಗಿದೆ. ಆ ಅಂಭ್ರಣಿಯು ಸಾಕ್ಷಾತ್ ಲಕ್ಷ್ಮಿಯೇ ಹೊರತು ಬೇರೆ ಅಲ್ಲ. ಏಕೆಂದರೆ, ಇದೇ ಸೂಕ್ತದ 7ನೇಯ ಋಕ್ಕಿನಲ್ಲಿ ಹೇಳುವ ಪ್ರಕಾರ, 'ನಾನು ಜಗತ್ತಿಗೆ ತಂದೆಯನ್ನು ಅಂದರೆ ಬ್ರಹ್ಮನನ್ನು ಪಡೆಯುವೆನು. ಅವನಿಗಿಂತಲೂ ಶ್ರೇಷ್ಠನಾದ ನನ್ನ ಕಾರಣನು ಸಮುದ್ರದೊಳಗೆ ಇದ್ದಾನೆ' ಎಂಬ ಅರ್ಥವು ಲಕ್ಷ್ಮಿಯನ್ನು ಬಿಟ್ಟು ಇತರರಲ್ಲಿ ಹೊಂದುವುದಿಲ್ಲ. ಆದುದರಿಂದ ಇತರರ ವ್ಯಾಖ್ಯಾನವು ಶ್ರುತಿಸ್ವಾರಸ್ಯಕ್ಕೆ ವಿರೋಧಿಯಾಗಿದೆಯೆಂದು ತಿಳಿಯುವುದು.

ಈ ಅಂಭ್ರಣೀಸೂಕ್ತದಲ್ಲಿ ಅಂಭ್ರಣೀನಾಮಕಳಾದ ಲಕ್ಷ್ಮಿಯು, ರುದ್ರಾದಿಸಕಲದೇವತೆಗಳು ತನಗೆ ಅನುಚರರೆಂದು ಹೇಳಿ, 5ನೇಯ ಋಕ್ಕಿನಲ್ಲಿ ತಾನು ಇಚ್ಛೆಬಂದಂತೆ ಯಾರನ್ನಾದರೂ ರುದ್ರನನ್ನು, ಬ್ರಹ್ಮನನ್ನು, ಋಷಿಯನ್ನು ಕೂಡ ಮಾಡುವೆನೆಂದೂ, 6ನೇಯ ಋಕ್ಕಿನಲ್ಲಿ ಬ್ರಹ್ಮನಿಗೆ (ಪಂಚಮಶಿರಚ್ಛೇದನ ಮಾಡುವುದರಿಂದ) ದ್ವೇಷಿಯಾಗಿರುವ ಘಾತಕನಾದ ರುದ್ರನನ್ನು ಸಂಹರಿಸುವುದಕ್ಕಾಗಿ ಧನುಸ್ಸನ್ನು ವಿಸ್ತರಿಸುವೆನೆಂದು ಕೂಡ ಹೇಳಿದ್ದಾಳೆ. ಇದರಿಂದ ಬ್ರಹ್ಮರುದ್ರಾದಿ ಸಕಲದೇವತೆಗಳು ಲಕ್ಷ್ಮಿಗೆ ಅಧೀನರೆಂದೂ, ಆ ಲಕ್ಷ್ಮಿಯು 7ನೇಋಕ್ಕಿನಪ್ರಕಾರ ಸಮುದ್ರಶಾಯಿಯಾದ ವಿಷ್ಣುವಿಗೆ ಅಧೀನಳೆಂದೂ, 8ನೆಋಕ್ಕಿನಲ್ಲಿ ಹೇಳಿರುವ ಪ್ರಕಾರ ತನ್ನ ಮಾಹಾತ್ಮ್ಯವು ಪರಿಮಿತವೆಂದು ಸಿದ್ಧಿಸುತ್ತದೆ. ಆದುದರಿಂದ ಇಂತಹ ಲಕ್ಷ್ಮಿಗೆ ಪತಿಯಾದ ಹರಿಯು ಸರ್ವೋತ್ತಮನು ಅಪರಿಮಿತಗುಣಪೂರ್ಣನೆಂದು ಹೇಳುವುದಕ್ಕೂ, ಪರಾಧೀನತ್ವಾದಿ ದೋಷಯುಕ್ತರಾದ ಇತರ ದೇವತೆಗಳು ಯಾರೂ ಸರ್ವೋತ್ತಮರಲ್ಲವೆಂಬುದಕ್ಕೂ ಯಾವ ಬಾಧಕವೂ ಇರುವುದಿಲ್ಲ.

ಅಲ್ಲದೇ, ಋಗ್ವೇದದ ಅ-8.ಅ-3.ವ-3,4ನೆಯ 'ಹಿರಣ್ಯಗರ್ಭ'ಸೂಕ್ತವೆಂಬ ಭಾಗವಿದೆ. ಈ ಸೂಕ್ತಕ್ಕೆ ಹಿರಣ್ಯಗರ್ಭಪದಕ್ಕೆ ರೂಢಿಯಿಂದ ವಾಚ್ಯನಾದ ಬ್ರಹ್ಮನೇ ಪ್ರತಿಪಾದ್ಯನೆಂಬುವುದು ಸರ್ವಸಮ್ಮತವು. ಇದರ 1ನೇಯಋಕ್ಕಿನಲ್ಲಿ ಬ್ರಹ್ಮನು ಆದಿಯಲ್ಲಿ ಹುಟ್ಟಿ , ಸಮಸ್ತಭೂತಗಳಿಗೂ ಯಜಮಾನನಾದನೆಂದೂ, 2ನೇಯದರಲ್ಲಿ ಆತ್ಮಬಲಾದಿ ಪ್ರದರಾದ ಸಕಲದೇವತೆಗಳು ಬ್ರಹ್ಮನನ್ನು ಆಶ್ರಯಿಸಿದ್ದಾರೆ; ಪಾಲಕರಾದ ಇಂದ್ರಾದಿಗಳು ಸಂಹಾರಕರಾದ ರುದ್ರಾದಿಗಳು ಬ್ರಹ್ಮನಿಗೆ ಛಾಯೆಯಂತೆ ಪ್ರತಿಬಿಂಬರಾಗಿದ್ದಾರೆ ಎಂದೂ, 9ನೇಯದರಲ್ಲಿ ಚಂದ್ರಾದಿ ರುದ್ರಾಂತ ಸಮಸ್ತ ಶ್ರೇಷ್ಠದೇವತೆಗಳನ್ನು ಬ್ರಹ್ಮನು ಹುಟ್ಟಿಸಿದನೆಂದೂ ಹೇಳಲ್ಪಟ್ಟಿದೆ. ಇದರಿಂದ ಇಷ್ಟು ಮಹಿಮೆಯುಳ್ಳವನಾದರೂ ಬ್ರಹ್ಮನು ಹುಟ್ಟಿರುವ ಕಾರಣ ಸರ್ವೋತ್ತಮನಲ್ಲವೆಂತಲೂ, ಆತನಿಂದ ಜನಿತರಾಗಿ ತದಧೀನವಾಗಿರುವ ರುದ್ರಾದಿಗಳು ಸರ್ವೋತ್ತಮರೆಂದು ಶಂಕಿಸಲು ಕೂಡ ಅರ್ಹರಲ್ಲವೆಂತಲೂ, ಇಂತಹ ಬ್ರಹ್ಮನಿಗೆ ಜನಕನಾದ ಹರಿಯೇ ಸರ್ವೋತ್ತಮನೆಂದೂ ಸಿದ್ಧಿಸುತ್ತದೆ.

ಹಾಗೆಯೇ ವಾಯುದೇವರೂ ವಿಷ್ಣುವಿಗಿಂತಲೂ ಅವರರೆಂತಲೂ, ರುದ್ರಾದಿಗಳಿಗಿಂತಲೂ ಶ್ರೇಷ್ಠರೆಂತಲೂ ತಿಳಿಯಪಡಿಸುವ ಶ್ರುತಿಗಳಿವೆ. ಋಗ್ಭಾಷ್ಯದಲ್ಲಿ ಉದಾಹರಿಸಲ್ಪಟ್ಟಿರುವ ಸೌಪರ್ಣಶ್ರುತಿಯಲ್ಲಿ ಅನಂತನಾದ ಹರಿಗಿಂತಲೂ ಲಕ್ಷ್ಮೀದೇವಿಯರು, ಅವರಿಗಿಂತಲೂ ಪ್ರಾಣನಾಮಕ ವಾಯುದೇವರು(ಇಲ್ಲಿ ಬ್ರಹ್ಮದೇವರೂನು ಗ್ರಾಹ್ಯರು), ಅವರಿಗಿಂತಲೂ ವಾಙ್ನಾಮಕರಾದ ಸರಸ್ವತೀ ಭಾರತೀಯರು, ಅವರಿಗಿಂತಲೂ ರುದ್ರದೇವರು(ಇಲ್ಲಿ ಗರುಡಶೇಷರು ಗ್ರಾಹ್ಯರು), ಅವರಿಗಿಂತಲೂ ಇಂದ್ರದೇವರು, ಅವರಿಗಿಂತಲೂ ಇತರರು ಅವರರೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಬೃಹದಾರಣ್ಯಕೋಪನಿಷತ್ತು ಅ-2.ಬ್ರಾ-2ರ, ಎರಡನೆಯ ವಾಕ್ಯದಲ್ಲಿ 'ಚಕ್ಷುಸ್ಸಿನಲ್ಲಿರುವ ವಾಯುದೇವರನ್ನು ಅಕ್ಷೀಣಗುಣರಾದ ಏಳು ದೇವತೆಗಳು ಸೇವಿಸುತ್ತಾರೆ; ಅವರಲ್ಲಿ ರುದ್ರದೇವರು ಕಣ್ಣಿನಲ್ಲಿರುವ ಕೆಂಪುಗೆರೆಗಳ ಅಧಿಷ್ಠಾನದಲ್ಲಿ ವಾಯುದೇವರಿಗೆ ಅಧೀನರಾಗಿರುವರು' ಎಂದು ಪ್ರತಿಪಾದಿತವಾಗಿದೆ.

ಋಗ್ವೇದ ಅ-8.ಅ-7.ವ-24ರ 7ನೇಯ ಋಕ್ 'ವಾಯುದೇವರು ರುದ್ರದೇವರೊಡನೆ ವಿಷದಪಾತ್ರೆಯಿಂದ ಪಾನಮಾಡಿದಾಗ ಆ ವಿಷವನ್ನು ತಿಕ್ಕಿ ಕಡೆದು ಕೊಟ್ಟರು' ಎಂದು ಹೇಳುತ್ತದೆ. ಇದರಿಂದ ವಿಷಪಾನದಲ್ಲಿ ರುದ್ರದೇವರಿಗೆ ವಾಯುದೇವರಷ್ಟು ಶಕ್ತಿಯಿಲ್ಲವೆಂದು ಲಬ್ಧವಾಗುವುದು.

ಹೀಗೆಯೇ ಮೇಲೆ ತೋರಿಸಿದ ಬೃಹದಾರಣ್ಯಕೋಪನಿಷತ್ತಿನ ಭಾಗದಲ್ಲಿ 'ಕಣ್ಣಿನಲ್ಲಿರುವ ಶುಕ್ಲರೂಪಾಧಿಷ್ಠಾನದಿಂದ ಇಂದ್ರದೇವರು ವಾಯುದೇವರಿಗೆ ಅಧೀನರಾಗಿರುವರು' ಎಂದು ಉಕ್ತವಾಗಿದೆ.

ಮತ್ತು ಋಅ-6.ಅ-7.ವ-4ರ 1ನೇಯ ಋಕ್ 'ನಾನು ಯುದ್ಧಭೂಮಿಯನ್ನು ಮುಂದೆ ಪ್ರವೇಶಿಸುವೆನು. ದೇವತೆಗಳೆಲ್ಲರೂ ನನ್ನನ್ನು

ಹಿಂಬಾಲಿಸಲಿ. ಎಲೈ ಇಂದ್ರನೇ, ನೀನು ನನಗೆ ಭಾಗವನ್ನು ಕೊಟ್ಟು ಪೂಜಿಸಿದವನಾದ ಕಾರಣ ನಿನ್ನೊಡನೆ ಸೇರಿ ಪರಾಕ್ರಮ ಕಾರ್ಯಗಳನ್ನು ಮಾಡುವೆನು' ಎಂದು ಒಂದಾನೊಂದು ಯುದ್ಧಸಮಯದಲ್ಲಿ ಇಂದ್ರನನ್ನು ಕುರಿತು ವಾಯುದೇವರು ಹೇಳಿದುದಾಗಿ ಪ್ರತಿಪಾದಿಸುವುದು. ಇದರಿಂದ ರುದ್ರೇಂದ್ರರು ವಾಯ್ವಧೀನರೆಂದು ಸಿದ್ಧಿಸಿತು.

ಋ.ಅ-8.ಅ-4.ವ-1ರ 5ನೇಯ ಋಕ್‌ನಲ್ಲಿ 'ಉಪೇಂದ್ರರೂಪದಲ್ಲಿ ತನಗೆ ಅಣ್ಣನಾದುದರಿಂದ ಹಿರಿಯನಾದ ಇಂದ್ರನನ್ನು ಅಶ್ವಮೇಧ ಯಾಗದಲ್ಲಿ ಯಜಮಾನನನ್ನು ಮಾಡಿಕೊಂಡು ತಾನು ಸೇವಿಸಿದವನಾದರೂ, ವಿಷ್ಣುವೇ ಇಂದ್ರನಿಗೆ ಸುಖಕರನಾದ ಪರದೇವನು ಎಂದು ಹೇಳಲ್ಪಟ್ಟಿದೆ. ಇದರಿಂದ ಇಂದ್ರನ ತಮ್ಮನಾದುದರಿಂದ ವಿಷ್ಣುವು ಇಂದ್ರನಿಗಿಂತಲೂ ಅವರನೆಂಬ ಶಂಕೆಗೂ ಪರಿಹಾರಸಿಗುವುದು.

ಮತ್ತು ತೈತ್ತರೀಯೋಪನಿಷತ್ತಿನಲ್ಲಿ ಆನಂದತಾರತಮ್ಯವನ್ನು ನಿರೂಪಿಸುವಾಗ ಇಂದ್ರನ ಆನಂದಕ್ಕಿಂತಲೂ ಅಧಿಕಾನಂದವನ್ನು ಹೇಳಿರುವುದರಿಂದ ಪರಿಮಿತಾನಂದವುಳ್ಳವನಾದ ಇಂದ್ರನಿಗೆ ಸರ್ವೋತ್ತಮತ್ವವು ಕೂಡುವುದಿಲ್ಲ.

ಹಾಗೆಯೇ ಋ.ಅ-2.ಅ-6.ವ-8ರ 2ನೇಯ ಋಕ್ಕಿನಲ್ಲಿ 'ಇಂದ್ರನಿಂದ ಸೂರ್ಯನು ಹುಟ್ಟಿದವನೆಂದು' ಹೇಳಲ್ಪಟ್ಟಿದೆ. ಇದರಿಂದ ಸೂರ್ಯನು ಇಂದ್ರನಿಗಿಂತಲೂ ಅವರನೆಂದು ಸಿದ್ಧಿಸುವುದು.

ಮತ್ತು ಐತರೇಯಬ್ರಾಹ್ಮಣದ 8ನೇ ಪಂಚಿಕೆಯಲ್ಲಿ 40ನೇಯ ಅಧ್ಯಾಯದ 5ನೇಯ ಖಂಡದಲ್ಲಿ 'ಬ್ರಹ್ಮಣಃ ಪರಿಮರ' ಎಂಬ ಕರ್ಮ ವನ್ನು ನಿರೂಪಿಸುವಾಗ 'ವಾಯುದೇವರಿಗೆ ಸುತ್ತಲೂ ವಿದ್ಯುತ್, ವೃಷ್ಟಿ , ಚಂದ್ರನು, ಆದಿತ್ಯನು, ಅಗ್ನಿಯು ಎಂಬ ಐದುದೇವತೆಗಳು ಮೃತರಾಗುವರು' ಎಂದು ಉಕ್ತವಾಗಿದೆ. ಇದರಿಂದ ಆದಿತ್ಯ ಶಬ್ದವಾಚ್ಯನಾದ ಸೂರ್ಯನಿಗೆ ಮರಣದೋಷವು ಉಕ್ತವಾಗಿದೆ.

ಮತ್ತು ಪುರುಷಸೂಕ್ತದಲ್ಲಿ ಸೂರ್ಯನು ಇತರದೇವತೆಗಳು ಕೂಡ ಚಕ್ಷುಸ್ಸು ಮೊದಲಾದುದರಿಂದ ಜನಿಸಿರುವುದಾಗಿ ಉಕ್ತವಾಗಿದೆ.

ಇದೇ ಪ್ರಕಾರ ಬಹುವಾಕ್ಯಗಳು ಇರುತ್ತವೆ. ಎಲ್ಲವನ್ನು ಉದಾಹರಿಸುವುದು ಸಾಧ್ಯವಿಲ್ಲ. ಹಾಗೆ ಮಾಡುವುದರಿಂದ ಫಲಾಧಿಕ್ಯವೂ ಇಲ್ಲ. ನಿದರ್ಶನಾರ್ಥವಾಗಿ ತೋರಿಸಿರುವ ಮೇಲೆಕಂಡ ವಾಕ್ಯಗಳಿಂದ ವಿಷ್ಣುವು ಸಕಲಗುಣಪೂರ್ಣನೆಂತಲೂ, ದೋಷರಹಿತನೆಂತಲೂ, ಬ್ರಹ್ಮಶಿವಾದಿ -ಗಳು ಗುಣಪೂರ್ಣರಲ್ಲವೆಂತಲೂ, ದೋಷಿಗಳೆಂತಲೂ ಸಿದ್ಧವಾಗುತ್ತದಾದುದರಿಂದ ಹರಿಯೇ ಸರ್ವೋತ್ತಮನೆಂದು ಹೇಳುವುದು ಯುಕ್ತವು.

***ಪೂರ್ವಪಕ್ಷ:-*** *ಈ ವಿಷಯದಲ್ಲಿ ಶಿವನೇ ಸರ್ವೋತ್ತಮನೆಂದು ಹೇಳುವ ವಾದಿಗಳು ಹೇಳುವುದೇನೆಂದರೆ:- ಸರ್ವಗುಣಪೂರ್ಣವೂ, ನಿರ್ದೋಷವೂ ಆದ ದೇವತೆಯು ಸರ್ವೋತ್ತಮನೆಂಬುದು ಯುಕ್ತವೇ. ಆದರೆ ಸರ್ವಗುಣಗಳಲ್ಲಿ ಒಂದಾದ ಸಕಲಜಗತ್ಕಾರಣತ್ವವು, ಮತ್ತು ಮುಮುಕ್ಷುಜ್ಞೇಯತ್ವವು ವಿಷ್ಣುವಿನಲ್ಲಿ ಕೂಡುವುದಿಲ್ಲವಾದ್ದರಿಂದ ವಿಷ್ಣುವು ಸರ್ವೋತ್ತಮನಲ್ಲ. ಅವು ಶಿವನಲ್ಲಿ ಕೂಡುತ್ತವಾದ ಕಾರಣ ಶಿವನೇ ಸರ್ವೋತ್ತಮ ನೆಂದು ಒಪ್ಪತಕ್ಕದು. ಹೇಗೆಂದರೆ:-*

*ಛಾಂದೋಗ್ಯೋಪನಿಷತ್ತಿನ 6-2-1ನೇ ವಾಕ್ಯದಲ್ಲಿ 'ಸೃಷ್ಟಿಗೆ ಪೂರ್ವದಲ್ಲಿ ಸತ್ತೆಂಬುದೇ ಇದ್ದಿತು' ಎಂದು ಹೇಳಿ, ಸನ್ಮೂಲಕವಾಗಿ ಸೃಷ್ಟಿಯು ನಿರೂಪಿತವಾಗಿದೆ. ಹಾಗೆಯೇ ಬೃಹದಾರಣ್ಯಕೋಪನಿಷತ್ತಿನಲ್ಲಿ 1-4-10ನೇ ವಾಕ್ಯದಲ್ಲಿ 'ಬ್ರಹ್ಮವೇ ಆದಿಯಲ್ಲಿದ್ದಿತು' ಎಂದು ಹೇಳಿ ಸೃಷ್ಟಿಯು ಉಕ್ತವಾಗಿದೆ. ತೈತ್ತರೀಯೋಪನಿಷತ್ತಿನ 3-1-1ನೇ ವಾಕ್ಯದಲ್ಲಿ 'ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಿಗೆ ಬ್ರಹ್ಮಕಾರಣವು' ಎಂದು ಉಕ್ತವಾಗಿದೆ. ಐತ್ತರೇಯೋಪನಿಷತ್ತಿನ 1-1ನೆಯ ವಚನವು ಆದಿಯಲ್ಲಿ ಆತ್ಮನಿದ್ದುದಾಗಿ ಹೇಳಿ, ಸೃಷ್ಟಿ ನಿರೂಪಣೆ ಮಾಡಿದೆ. ಈ ವಾಕ್ಯಗಳಿಂದ ಜಗತ್ತಿಗೆ ಕಾರಣನಾಗಿ ತಿಳಿದುಬರುವ 'ಸತ್, ಬ್ರಹ್ಮ , ಆತ್ಮಾ' ಎಂದು ಕರೆಸಿಕೊಳ್ಳುವ ವಸ್ತುವು ಚೇತನವೇ ಹೊರತು ಅಚೇತನವಲ್ಲವೆಂಬುದು, ಆ ಸೃಷ್ಟಿಕರ್ತೃವು 'ತಾನು ಬಹುವಾದೇನು' ಎಂದು ಇಚ್ಛೆಸಿದುದಾಗಿಯೂ, ಆಲೋಚಿಸಿದುದಾಗಿಯೂ ಹೇಳುವ ತೈತ್ತಿರೀಯೋಪನಿಷತ್ತಿನ 2-6-1ನೇ ವಾಕ್ಯದಿಂದಲೂ, ಛಾಂದೋಗ್ಯೋಪನಿಷತ್ತಿನ 6-2-3ನೆಯ ವಾಕ್ಯದಿಂದಲೂ ಸಿದ್ಧಿಸುತ್ತದೆ. ಅಂತಹ ಚೇತನನು ವಿಷ್ಣುಶಿವಾದಿಗಳಲ್ಲೊಬ್ಬನೆಂದು ಬೇರೆ ವಾಕ್ಯಗಳಿಂದ ನಿರ್ಣಯಿಸತಕ್ಕುದಾಗಿದೆ.*

*ವಾಕ್ಯಾಂತರಗಳನ್ನು ವಿಚಾರಮಾಡಲಾಗಿ, ಶಿವನೇ ಜಗತ್ಕಾರಣನೆಂದು ಸ್ಪಷ್ಟವಾಗುತ್ತದೆ. ಶ್ವೇತಾಶ್ವತರೋಪನಿಷತ್ತಿನಲ್ಲಿ 1-1ನೇಯ ವಾಕ್ಯದಲ್ಲಿ 'ಜಗತ್ತಿಗೆ ಕಾರಣವಾಗಿರುವ ಬ್ರಹ್ಮಯಾರು ಎಂದರೆ ಯಾವದೇವತೆಯು?' ಎಂದು ಸೃಷ್ಟಿಪ್ರತಿಪಾದಕವಾದ ವಾಕ್ಯಗಳ ವಿಚಾರ ಮಾಡುವವರಿಗೆ ಉಂಟಾಗಬಹುದಾದ ಸಂಶಯ ಮೂಲಕ ಪ್ರಶ್ನವು ತೋರಿಸಲ್ಪಟ್ಟಿದೆ. ಮುಂದೆ ಆದಕ್ಕುತ್ತರರೂಪವಾಗಿ, 8ನೇಯ ವಾಕ್ಯದಲ್ಲಿ*

*'ವ್ಯಕ್ತಾವ್ಯಕ್ತಕ್ಷರಾಕ್ಷರಾತ್ಮಕವಾಗಿ ಸಂಯುಕ್ತವಾದ ಈ ವಿಶ್ವವನ್ನು ಈತನು ಭರಿಸುತ್ತಾನೆ' ಎಂದು ರುದ್ರದೇವರಲ್ಲಿ ರೂಢವಾದ **'ಈಶ'** ಪದದಿಂದ ಉಪಕ್ರಮದಲ್ಲಿ ನಿರ್ದೇಶಿಸಿ, ಮಧ್ಯದಲ್ಲಿ ಅಂದರೆ 18ನೇಯ ವಾಕ್ಯದಲ್ಲಿ 'ಯಾವಾಗ ಅಂಧಕಾರವು ಇತ್ತೋ, ಆಗ ಹಗಲು, ರಾತ್ರಿಯು, ಸತ್ತೆಂಬುದೂ ಅಸತ್ತೆಂಬುದೂ ಯಾವುದೂ ಇರಲಿಲ್ಲ. ಕೇವಲ ಶಿವನೇ ಇದ್ದನು. ಅದು ಅಕ್ಷರವು. ಅದು ಸವಿತೃವಿನ ವರೇಣ್ಯವು. ಅದರಿಂದ ಪುರಾತನವಾದ ಪ್ರಜ್ಞೆಯು ಹೊರಟಿತು' ಎಂದು ಪ್ರತಿಪಾದಿಸಿರುವುದರಿಂದ ಈಶ, ಶಿವಾದಿ ನಾಮಾಂತರಯುಕ್ತನಾದ ರುದ್ರನೇ ಮೇಲೆ ಹೇಳಿದ ಉಪನಿಷತ್ತುಗಳಲ್ಲಿ ಸದ್ಬ್ರಹ್ಮಾತ್ಮ ಶಬ್ದಗಳಿಂದ ಅಭಿಪ್ರೇತವಾದ ಜಗತ್ಕಾರಣನೆಂದು ಸ್ಪಷ್ಟವಾಗುತ್ತದೆ. ಮಹಾನಾರಾಯಣೋಪನಿಷತ್ತಿನ 1ನೇಯ ವಾಕ್ಯದಲ್ಲಿ 'ನಾರಾಯಣನೊಬ್ಬನೇ ಇದ್ದನು' ಎಂದು ಹೇಳಲ್ಪಟ್ಟಿರುತ್ತದೆಯಾದ ಕಾರಣ ಶಿವನೇ ಜಗತ್ಕಾರಣನು ಎಂದು ಹೇಳಲು ವಿಷಯಹೇತುವು ಇಲ್ಲವೆನ್ನಕೂಡದು. ಏಕೆಂದರೆ, ಈ ಮಹಾನಾರಾಯಣೋಪನಿಷತ್ತಿನ ವಾಕ್ಯದಲ್ಲಿ 'ಹವೈ' ಎಂಬ ಶಬ್ದವಿರುವುದರಿಂದ 'ನಾರಾಯಣನೊಬ್ಬನೇ ಇದ್ದನಂತೆ' ಎಂದು ಆ ವಾಕ್ಯಕ್ಕೆ ಅರ್ಥವಾಗುವುದರಿಂದ ಅಲ್ಲಲ್ಲಿ ಪ್ರಸಿದ್ಧವಾದ ನಾರಾಯಣನೊಬ್ಬನೇ ಇದ್ದನೆಂಬ ಅರ್ಥವನ್ನು ಈ ವಾಕ್ಯವು ಅನುವಾದಮಾಡುತ್ತದೆಯೇ ಹೊರತು, ಸ್ವಯಂ ವಿಧಿಸುವುದಿಲ್ಲವೆಂದು ಹೇಳಬೇಕಾಗುತ್ತದೆ. ಇಂತಹ ಪದವು ಮೇಲೆ ಉದಾಹರಿಸಿದ ಶಿವವಾಕ್ಯದಲ್ಲಿ ಇಲ್ಲವೆಂಬುದೇ ವಿಶೇಷಹೇತುವಾಗಿದೆ. ಈ ಪ್ರಕಾರವಾಗಿ ಶಿವಸರ್ವೋತ್ತಮತ್ವ ವಾದಿಗಳು ಹೇಳುತ್ತಾರೆ.*

**ಸಮಾಧಾನ:-** ಹರಿನಾರಾಯಣಾದಿ ಶಬ್ದವಾಚ್ಯನಾದ ವಿಷ್ಣುವೇ ಸಕಲಜಗತ್ಕಾರಣವು, ಮುಮುಕ್ಷುಜ್ಞೇಯವೂ ಆದ ಪರತತ್ತ್ವವು. ಏಕೆಂದರೆ- ಮಹೋಪನಿಷತ್ತಿನಲ್ಲಿ 'ನಾರಾಯಣನೊಬ್ಬನೇ ಇದ್ದನು, ಬ್ರಹ್ಮನಿರಲಿಲ್ಲ, ಈಶಾನನಿರಲಿಲ್ಲ, ಈ ದ್ಯಾವಾಪೃಥಿವಿಗಳು ಇರಲಿಲ್ಲ, ನಕ್ಷತ್ರಗಳು ಇರಲಿಲ್ಲ, ನೀರು ಇರಲಿಲ್ಲ, ಅಗ್ನಿಷೋಮರಿರಲಿಲ್ಲ, ಸೂರ್ಯನಿರಲಿಲ್ಲ ಎಂಬುದು ಮೊದಲು ಮಾಡಿ ಅನಂತರ ಮತ್ತು ನಾರಾಯಣನು ಇನ್ನೊಂದು ಇಚ್ಛೆಯನ್ನು ಮನಸ್ಸಿನಲ್ಲಿ ಮಾಡಿದನು. ಹಾಗಿರುವಾಗ ಅವನ ಲಲಾಟದದೆಸೆಯಿಂದ ಸ್ವೇದವು(ಬೆವರು)ಬಿದ್ದಿತು. ಆ ಉದಕವು ಸುವರ್ಣಾತ್ಮಕವಾದ ಅಂಡವಾಯಿತು. ಅಲ್ಲಿ ಚತುರ್ಮುಖಬ್ರಹ್ಮನು ಹುಟ್ಟಿದನು. ಅನಂತರ ಮತ್ತು ನಾರಾಯಣನು ಇನ್ನೊಂದು ಇಚ್ಛೆಯನ್ನು ಮನಸ್ಸಿನಲ್ಲಿ ಮಾಡಿದನು. ಹಾಗಿರುವಾಗ ಆತನ ಲಲಾಟದ ದೆಸೆಯಿಂದ ಸ್ವೇದವು ಬಿದ್ದಿತು. ಅದು ಬುದ್ಬುದವು ಆಯಿತು. ಅದರ ದೆಸೆಯಿಂದ ತ್ರಿಲೋಚನನು ಶೂಲಪಾಣಿಯು ಆದ ಪುರುಷನು ಹುಟ್ಟಿದನು' ಎಂಬವರೆವಿಗೂ ವಾಕ್ಯಗಳ ಸಮುದಾಯವಿದೆ.

ಹೀಗೆಯೇ ನಾರಾಯಣೋಪನಿಷತ್ತಿನ ಆದಿಯಲ್ಲಿ 'ಅನಂತರ ಪುರುಷನಾದ ನಾರಾಯಣನು ಪ್ರಜೆಗಳನ್ನು ಸೃಜಿಸಲಿಚ್ಛಿಸಿದನು. ಅನಂತರ ಜಲವನ್ನು ಸೃಜಿಸಿದನು. ನಾರಾಯಣನ ದೆಸೆಯಿಂದ ಬ್ರಹ್ಮನು ಹುಟ್ಟುತ್ತಾನೆ. ನಾರಾಯಣನ ದೆಸೆಯಿಂದ ರುದ್ರನು ಹುಟ್ಟುತ್ತಾನೆ. ನಾರಾಯಣನ ದೆಸೆಯಿಂದ ಇಂದ್ರನು, ದ್ವಾದಶಾದಿತ್ಯರು, ರುದ್ರರು, ವಸುಗಳು, ಸರ್ವದೇವತೆಗಳು ಹುಟ್ಟುತ್ತಾರೆ. ಸರ್ವಲೋಕಗಳು, ಸರ್ವಭೂತಗಳು ಕೂಡ ನಾರಾಯಣನ ದೆಸೆಯಿಂದ ಹುಟ್ಟುತ್ತವೆ; ನಾರಾಯಣನಲ್ಲೇ ಲಯವನ್ನು ಹೊಂದುತ್ತವೆ' ಎಂದು ಪ್ರತಿಪಾದಿಸುವ ವಚನಗಳ ಸಮುದಾಯವಿದೆ.

ಈ ಎರಡು ಉಪನಿಷತ್ತುಗಳ ವಚನಗಳಿಂದ ಸೃಷ್ಟಿಗೆ ಪೂರ್ವದಲ್ಲಿ ಬ್ರಹ್ಮೇಶಾನರು ಮೊದಲಾದ ಯಾವವಸ್ತುವೂ ಇರಲಿಲ್ಲವೆಂತಲೂ, ನಾರಾಯಣನೊಬ್ಬನೇ ಇದ್ದನೆಂತಲೂ, ಜಗತ್ತಿಗೆ ಕಾರಣರೆಂದೆನ್ನಿಸಿಕೊಳ್ಳುತ್ತಿರುವ ಪ್ರಮುಖರಾದ ಬ್ರಹ್ಮೇಶಾನರು ಮೊದಲಾದ ಸರ್ವದೇವತೆ-ಗಳಿಗೂ ನಾರಾಯಣನೇ ಕಾರಣನೆಂತಲೂ ತಿಳಿದುಬರುತ್ತದೆ. ಈ ವಾಕ್ಯಗಳಲ್ಲಿರುವ 'ಹವೈ' ಶಬ್ದವು ಅವಧಾರಣಾರ್ಥಕವೇ ಹೊರತು ಅನುವಾದತ್ವ ಸೂಚಕವಲ್ಲ. ಆದುದರಿಂದಲೇ 'ಹವೈ'ಶಬ್ದದ ಅರ್ಥಕ್ಕೆ ವಿವರಣಪರವಾಗಿ ಬ್ರಹ್ಮೇಶಾದಿಗಳ ನಿಷೇಧವು ಮುಂದಿರುವ ವಾಕ್ಯಗಳಲ್ಲಿ ಮಾಡಲ್ಪಟ್ಟಿದೆ. ಸಕಲಜಗತ್ಕಾರಣತ್ವವೇ ಮುಮುಕ್ಷುಜ್ಞೇಯವಾದ ಪರತತ್ತ್ವಕ್ಕೆ ಲಕ್ಷಣವಾದುದರಿಂದ ಮುಮುಕ್ಷುಜ್ಞೇಯನು ನಾರಾಯಣನೇ. ಸೃಷ್ಟಿಗೆ ಪೂರ್ವದಲ್ಲಿ ಇರಲಿಲ್ಲವೆಂದು ತಿಳಿಸಲ್ಪಡುವ ಬ್ರಹ್ಮರುದ್ರರು ಮೊದಲಾದವರು ಆಗ ಇದ್ದನೆಂದು ತಿಳಿಸಲ್ಪಡುವ ನಾರಾಯಣನಂತೆ ಜಗತ್ಕಾರಣರೆಂದು ಹೇಳುವುದು ಯುಕ್ತವೇ? ಅಲ್ಲ. ಹೀಗೆ ನಾರಾಯಣನು ಸೃಷ್ಟಿಗೆ ಪೂರ್ವದಲ್ಲಿ ಇರಲಿಲ್ಲವೆಂದು ಬೋಧಿಸುವ ಶ್ರುತಿವಚನವು ಎಲ್ಲಾದರೂ ಕಂಡುಬರುತ್ತಿದೆಯೇ? ಎಲ್ಲಿಯೂ ಇಲ್ಲ.

ಶಿವನೊಬ್ಬನೇ ಇದ್ದನೆಂದು ಹೇಳುವ ಶ್ವೇತಾಶ್ವತರೋಪನಿಷತ್ತಿನ ವಾಕ್ಯದಲ್ಲಿರುವ 'ಕೇವಲ'ಶಬ್ದದಿಂದ ಶಿವೇತರವಾದುದೆಲ್ಲ ಇರಲಿಲ್ಲ-ವೆಂದು ಲಭಿಸುತ್ತಾದುದರಿಂದ ನಾರಾಯಣನೂ ಇರಲಿಲ್ಲವೆಂದೆನ್ನಕೂಡದು. ಅದೇ ವಾಕ್ಯದಲ್ಲಿ ಇಲ್ಲದಿದದ್ದವುಗಳು ಸತ್ತು, ಅಸತ್ತು, ಹಗಲು,ರಾತ್ರಿಯೆಂದು ಎಣಿಸಲ್ಪಟ್ಟಿರುವುದರಿಂದ ನಾರಾಯಣನು ಇರಲಿಲ್ಲವೆಂದು ಆ ವಾಕ್ಯದ ಅರ್ಥವಾಗುವುದಿಲ್ಲ. ಯಾವುದೂ

ಇರಲಿಲ್ಲವೆಂದೇ ಕೇವಲಶಬ್ದಕ್ಕೆ ತಾತ್ಪರ್ಯವೆನ್ನುವ ಪಕ್ಷದಲ್ಲಿ 'ತಮಸ್ಸು ಇದ್ದಿತು' ಎಂದು ಅದೇ ವಾಕ್ಯದಲ್ಲಿ ಹೇಳಿರುವುದು ವಿರುದ್ಧವಾಗುತ್ತದೆ. ಅಲ್ಲದೇ ಈಶ್ ಧಾತು ನಿಷ್ಪನ್ನವಾದ ಈಶಶಬ್ದಕ್ಕೆ ಸಮರ್ಥನೆಂದು, ಶಿವಶಬ್ದಕ್ಕೆ ಮಂಗಳಕರನೆಂದು ಯೋಗಲಭ್ಯಾರ್ಥವು ವಿಷ್ಣುವಿನಲ್ಲಿ ಕೂಡುತ್ತದೆ. ವಿಷ್ಣುಸಹಸ್ರನಾಮದಲ್ಲಿ ಈಶಶಿವಾದಿ ಶಬ್ದಗಳು ಪಠಿತವಾಗಿಯೂ ಇರುತ್ತವೆ. ಆದಕಾರಣ ಈಶಶಿವ ಶಬ್ದಮಾತ್ರಬಲದಿಂದ ಶ್ವೇತಾಶ್ವತರೋ-ಪನಿಷತ್ತು ಶಿವಕಾರಣತ್ವಬೋಧಕವೆಂಬುದು ಸರಿಯಲ್ಲ. ಬಾಧಕವಿಲ್ಲದರಿಂದಲೂ ಪ್ರಮಾಣವಿರುವುದರಿಂದಲೂ ವಿಷ್ಣುವೇ ಜಗತ್ಕಾರಣನು.

ಅಲ್ಲದೆ, 'ಯಾವಾಗ ತಮಸ್ಸು ಇದ್ದಿತ್ತೋ, ಆಗ ಕೇವಲ ಶಿವನೇ ಇದ್ದನು; ಹಗಲು,ರಾತ್ರಿಯು, ಸತ್ತು, ಅಸತ್ತು ಯಾವುದೂ ಇರಲಿಲ್ಲ' ಎಂದು ಪ್ರತಿಪಾದಿಸುವ ಶ್ವೇತಾಶ್ವತರೋಪನಿಷತ್ ವಾಕ್ಯದಲ್ಲಿ 'ಯಾವಕಾಲವಿಶೇಷದಲ್ಲಿ ತಮಸ್ಸು ಇದ್ದಿತ್ತೋ' ಎಂದು ಅನುವಾದವಿರುತ್ತದೆ. ಅನುವಾದಕ್ಕೆ ಪುರೋವಾದವು( ಅಂದರೆ 'ಇಂತಹ ಕಾಲದಲ್ಲಿ ತಮಸ್ಸು ಇದ್ದಿತು' ಎಂದು ಹೇಳುವ ವಾಕ್ಯವು) ಅವಶ್ಯವಾಗಿ ಇರಬೇಕು. ಅಂತಹ ಪುರೋವಾದವಾಕ್ಯವಾದರೂ 'ಅವ್ಯಕ್ತವು ಅಕ್ಷರದಲ್ಲಿಯೂ, ಅಕ್ಷರವು ತಮಸ್ಸಿನಲ್ಲಿಯೂ, ತಮಸ್ಸು ಪರನಾದ ದೇವನಲ್ಲಿಯೂ ಲಯವನ್ನು ಹೊಂದುತ್ತದೆ' ಎಂದು ಆ ಅರ್ಥವನ್ನು ನಿರೂಪಿಸುವ ಸುಬಾಲೋಪನಿಷತ್ ವಾಕ್ಯವೇ ಆಗಬೇಕಾಗಿದೆ. ಆದುದರಿಂದ ಶ್ವೇತಾಶ್ವತರವಾಕ್ಯವು ಸುಬಾಲೋಪನಿಷದ್ವಾಕ್ಯದ ಸಹಾಯದಿಂದ ಅರ್ಥವನ್ನು ತಿಳಿಸತಕ್ಕುದಾಗಿರುತ್ತದೆ. ಸುಬಾಲೋಪನಿಷತ್ತಿನಲ್ಲಾದರೋ ತಮಸ್ಸಿಗೆ ಅಧಿಷ್ಠಾತೃವಾಗಿ ನಾರಾಯಣನೇ ಪ್ರತಿಪಾದಿತನಾಗಿರುವುದರಿಂದ ಅದಕ್ಕೆ ವಿರುದ್ಧವಾಗಿ ಶಿವನು ತಮಸ್ಸಿಗೆ ಅಧಿಷ್ಠಾತೃವೆಂಬ ಅರ್ಥವನ್ನು ಮೇಲೆ ಹೇಳಿದ ಶ್ವೇತಾಶ್ವತರ ಮಂತ್ರವು ಪ್ರತಿಪಾದಿಸಲು ಸಮರ್ಥವಾಗುವುದಿಲ್ಲ. ಈ ಕಾರಣದಿಂದಲೂ ಆ ಮಂತ್ರದಲ್ಲಿರುವ ಶಿವಶಬ್ದವೂ ನಾರಾಯಣ ಪರವೆಂದು ಒಪ್ಪಬೇಕಾಗಿರುವುದರಿಂದ ಸೃಷ್ಟಿಗೆ ಪೂರ್ವದಲ್ಲಿ ಶಿವನೇ ಇದ್ದನೆಂಬುದಕ್ಕೆ ಪ್ರಮಾಣವಿಲ್ಲ.

***ಪೂರ್ವಪಕ್ಷ:-*** *'ತಮಸ್ಸು ಇದ್ದಿತು' ಎಂದು ಪ್ರತಿಪಾದಿಸುವುದು ಸುಬಾಲೋಪನಿಷದ್ವಾಕ್ಯವು ಒಂದೇ ಆಗಿದ್ದರೆ, ಶ್ವೇತಾಶ್ವತರವಾಕ್ಯವು ತದವಲಂಬಿಯಾಗಿರುವುದರಿಂದ ಆದರ ಅರ್ಥಕ್ಕೆ ವಿರುದ್ಧವಾಗಿ 'ಶಿವನು ತಮಸ್ಸಿಗೆ ಅಧಿಷ್ಠಾತೃವು' ಎಂಬ ಅರ್ಥವನ್ನು ಪ್ರತಿಪಾದಿಸಕೂಡದೆಂದು ಹೇಳಬಹುದು. ಆದರೆ 'ತಮಸ್ಸು ಇದ್ದಿತು' ಎಂದು ಪ್ರತಿಪಾದಿಸುವ ವಾಕ್ಯಗಳು ಅನೇಕಗಳಿವೆ. ಅವುಗಳಲ್ಲಿ ಕೆಲವು ನಾರಾಯಣನನ್ನು, ಕೆಲವು ಪ್ರಜಾಪತಿಯನ್ನು , ಕೆಲವು ಪರಶಬ್ದವಾಚ್ಯನನ್ನು ತಮೋಧಿಷ್ಠಾತೃವೆಂದು ಪ್ರತಿಪಾದಿಸುತ್ತವೆ. ಆದಕಾರಣ ಅಂತಹ ವಾಕ್ಯಗಳಿಗೆಲ್ಲ ವಿರೋಧ-ವಿಲ್ಲದಂತೆ ಏಕಾರ್ಥತ್ವವನ್ನು ನಿರೂಪಿಸುವುದಕ್ಕಾಗಿ, ಅವುಗಳಲ್ಲಿ ಹೇಳಿರುವ ತಮಸ್ಸಿನ ಇರುವಿಕೆಯನ್ನು ಮಾತ್ರ ಅನುವದಿಸಿ ತಮೋಧಿಷ್ಠಾತೃವಾದ ದೇವತೆಯು ಶಿವನೇ ಎಂಬುದಾಗಿ, ಮೇಲೆ ಸೂಚಿತವಾದ ಶ್ವೇತಾಶ್ವತರ ವಾಕ್ಯವು ಪ್ರತಿಪಾದಿಸುತ್ತದೆ ಎಂದು ಹೇಳುವುದರಲ್ಲಿ ಯಾವ ಬಾಧಕವೂ ಇರುವುದಿಲ್ಲವಾದುದರಿಂದ ಸೃಷ್ಟಿಗೆ ಪೂರ್ವದಲ್ಲಿ ಶಿವನೇ ಇದ್ದನೆಂದು ಆ ವಾಕ್ಯದಿಂದ ಸಿದ್ಧವಾಗುತ್ತದೆ.*

**ಸಮಾಧಾನ:-** ವಾಕ್ಯಾಂತರಗಳಲ್ಲಿಯೂ ಅನುವಾದತ್ವಕ್ಕೆ ಸೂಚಕವಾದ ವೈಶಬ್ದಾದಿಗಳು ಇರುತ್ತವಾದಕಾರಣ ಆ ವಾಕ್ಯಗಳು ಪುರೋವಾದ-ವಾಗಲು ಅರ್ಹವಲ್ಲ. ಒಂದು ವೇಳೆ ಅನುವಾದ ಚಿನ್ಹವಿಲ್ಲದ ವಾಕ್ಯವಿದ್ದರೂನೂ, ಎಲ್ಲಾ ವಾಕ್ಯಗಳಿಗೂ ಅವಿರೋಧದಿಂದ ಅರ್ಥವ್ಯವಸ್ಥೆಯು ಶಿವಪರವಾದ ಶ್ವೇತಾಶ್ವತರ ವಾಕ್ಯದಿಂದೇ ಆಗಬೇಕೆಂಬುದಕ್ಕೆ ವಿಶೇಷಹೇತುವಿರುವುದಿಲ್ಲ. ಇದರಂತೆ ಅನುವಾದ ಚಿನ್ಹವಾದ 'ವೈ'ಶಬ್ದದಿಂದ ಯುಕ್ತವಾದ ಮತ್ತೊಂದು ವಾಕ್ಯವನನ್ನನುಸರಿಸಿ ಪ್ರಜಾಪತಿಗೆ ತಮೋಧಿಷ್ಠಾತೃತ್ವವನ್ನು ಏಕೆ ಹೇಳಬಾರದು? ಮತ್ತು ಹೀಗೆ ಹೇಳುವುದರಿಂದ ವಾಕ್ಯಗಳಿಗೆ ವಿರೋಧಪರಿಹಾರವಾಗುವುದೂ ಇಲ್ಲ. ನಾರಾಯಣನಿಗೆ ತಮೋಧಿಷ್ಠಾತೃತ್ವವನ್ನು ಪ್ರತಿಪಾದಿಸುವ ಸುಬಾಲೋಪನಿಷದ್ವಾಕ್ಯಕ್ಕೆ , ಮತ್ತು ಪ್ರಜಾಪತಿಗೆ ಅದನ್ನು ಹೇಳುವ ವಾಕ್ಯಕ್ಕೆ ಸಹ ಏನು ಗತಿ ಕಲ್ಪನೆಯಾದಂತಾಯಿತು. ಆ ವಾಕ್ಯಗಳಲ್ಲಿರುವ ನಾರಾಯಣ ಪ್ರಜಾಪತಿ ಶಬ್ದಗಳಿಗೆ ಶಿವನೇ ಅರ್ಥವೆಂಬುದೇ ಈ ವಾಕ್ಯದಿಂದ ಸಿದ್ಧವಾಗುವ ಗತಿಯೆಂದು ಹೇಳಬೇಕಲ್ಲವೇ? ಆ ಶಬ್ದಗಳಿಗೆ ಶಿವನಲ್ಲಿ ರೂಢಿಯೋಗಗಳಿಲ್ಲ -ವಾದ್ದರಿಂದ ಲಕ್ಷಣಾವೃತ್ತಿಯನ್ನೇ ಹೇಳಬೇಕಾಗುತ್ತದೆ. ಅನುಪಪತ್ತಿ ಇಲ್ಲದೇ ಅನೇಕ ಶಬ್ದಗಳಿಗೆ ಲಕ್ಷಣಾಕಲ್ಪನೆಯು ಅನ್ಯಾಯವಲ್ಲವೇ? ಅದಕ್ಕಿಂತಲೂ ಶಿವಪ್ರಜಾಪತ್ಯಾದಿ ಶಬ್ದಗಳಿಗೆ ಲಕ್ಷಣಾಕಲ್ಪನೆ ಇಲ್ಲದೇ ಯೋಗವೃತ್ತಿಯಿಂದ ನಾರಾಯಣಪರತ್ವವನ್ನು ಹೇಳಿ ನಾರಾಯಣನೇ ತಮೋಧಿಷ್ಠಾತೃವು ಎಂದಂಗೀಕರಿಸುವುದು ಯುಕ್ತವು. ಈ ಪಕ್ಷದಲ್ಲಿ ಬ್ರಹ್ಮರುದ್ರರು ಸೃಷ್ಟಿಗೆ ಪೂರ್ವದಲ್ಲಿ ಇರಲಿಲ್ಲವೆಂದು ಪ್ರತಿಪಾದಿಸುವ ಮಹೋಪನಿಷತ್ತು ಮತ್ತು ನಾರಾಯಣೋಪನಿಷತ್ತುಗಳ ವಿರೋಧದ ಪರಿಹಾರವೂ ಆಗುತ್ತದೆ. ಎಲ್ಲಾವಾಕ್ಯಗಳಿಗೂ ಶಿವಪರತ್ವವನ್ನು ಹೇಳುವ ಪಕ್ಷದಲ್ಲಿ ಮೇಲೆ ತೋರಿಸಿದ ಉಪನಿಷತ್ತುಗಳ ವಿರೋಧವು ಅಪರಿಹಾರ್ಯವು. ಆದುದರಿಂದ ಶಿವನು ಸೃಷ್ಟಿಗೆ ಪೂರ್ವದಲ್ಲಿ ಇದ್ದನೆಂಬುವುದಕ್ಕೆ

ಪ್ರಮಾಣವಿಲ್ಲ

***ಪೂರ್ವಪಕ್ಷ:-*** *ಶಿವಾದಿಶಬ್ದಗಳಿಗೆ ನಾರಾಯಣಪರತ್ವವನ್ನು ಒಪ್ಪುವ ಪಕ್ಷದಲ್ಲಿ ಕಾರಣ ವಾಕ್ಯಗಳಿಗೆಲ್ಲಾ ಸಾಮಂಜಸ್ಯವಾಗುತ್ತದೆಯೆಂದು ಹೇಳುವುದು ಸರಿಯಲ್ಲ. ಈಗ ವಿಚಾರದಲ್ಲಿ ಇರುವ ಶ್ವೇತಾಶ್ವತರ ಮಂತ್ರಕ್ಕೆ ಸಾಮಂಜಸ್ಯವು ನಾರಾಯಣಪಕ್ಷದಲ್ಲಿ ಬರುವುದಿಲ್ಲ. ಅದು ಹೇಗೆಂದರೆ-'ಯದಾ' ಶಬ್ದವಿರುವುದರಿಂದ 'ಯಾವಾಗ ತಪಸ್ಸು ಇದ್ದಿತೋ' ಎಂಬವರೆಗೂ ಅನುವಾದವೆಂಬುದು ಉಭಯರಿಗೂ ಸಮ್ಮತವಷ್ಟೆ. ಇದಕ್ಕೆ ಪುರೋವಾದವಾಕ್ಯವು ವೈಷ್ಣವ ಪಕ್ಷದಲ್ಲಿ ಪೂರ್ವದಲ್ಲಿ ಉದಾಹೃತವಾದ ಸುಬಾಲೋಪನಿಷದ್ವಾಕ್ಯವೇ ಆಗಬೇಕು. ಆ ವಾಕ್ಯದಲ್ಲಾದರೋ ನಾರಾಯಣನೊಬ್ಬನೇ ಇದ್ದನೆಂಬ ಅರ್ಥವೂ ಪ್ರತಿಪಾದಿತವಾಗಿದೆ. ಆದುದರಿಂದ ಈ ಶ್ವೇತಾಶ್ವತರ ಮಂತ್ರವು ಸಮಗ್ರವು ಸುಬಾಲೋಪನಿಷತ್ತಿಗೆ ಅನುವಾದವೆಂದು ಹೇಳಬೇಕು. ಹಾಗೆ ಹೇಳುವ ಪಕ್ಷದಲ್ಲಿ ಈ ಮಂತ್ರಕ್ಕೆ ಹೊಸದಾಗಿ ಅರ್ಥವೇ ಇಲ್ಲವೆಂದು ಒಪ್ಪಬೇಕಾಗುವುದು.*

*ಇಂತಹ ಪ್ರಬಲದೋಷವನ್ನು ಸಹಿಸುವುದಕ್ಕಿಂತಲೂ ನಾರಾಯಣಾದಿ ಶಬ್ದಗಳಿಗೆ ಶಿವನಲ್ಲಿ ಲಕ್ಷಣಾಕಲ್ಪನೆಯನ್ನು ಮಾಡಿ ಎಲ್ಲಾ ಕಾರಣ-ವಾಕ್ಯಗಳೂ ಶಿವಪರವೆಂದು ಅಂಗೀಕರಿಸುವುದು ಉಚಿತವು. ಈ ಪಕ್ಷದಲ್ಲಿ ಶ್ವೇತಾಶ್ವತರ ಮಂತ್ರದ ಸಕಲಭಾಗವೂ ಸಾರ್ಥಕವಾಗುತ್ತದೆ. ಹೇಗೆಂದರೆ-'ತಮಸ್ಸು ಯಾವಾಗ ಇದ್ದಿತೋ, ಆಗ ಸದಸದಹೋರಾತ್ರಗಳಿರಲಿಲ್ಲ; ಕೇವಲ ಶಿವನೇ ಇದ್ದನು' ಎಂದು ಹೇಳುವ ಪೂರ್ವಾರ್ಥವು ಸುಬಾಲೋಪನಿಷದಾದಿ ವಾಕ್ಯಗಳಲ್ಲಿ ಇರುವ ನಾರಾಯಣಾದಿ ಶಬ್ದಗಳಿಗೆ ಶಿವಪರತ್ವವನ್ನು ವಿಧಿಸುವುದರಿಂದ ಆ ವಾಕ್ಯಗಳಿಗೆ ಶಿವನಲ್ಲಿ ಪರ್ಯವಸಾನವನ್ನು ಪ್ರತಿಪಾದಿಸುತ್ತವೆ. ಉತ್ತರಾರ್ಧದಲ್ಲಿ, 'ಅದು ಅಕ್ಷರವು' ಎಂಬ ಶಿವನಿಗೆ ಅಕ್ಷರ ಶಬ್ದಾರ್ಥತ್ವವನ್ನು ವಿಧಿಸುವ ಭಾಗವು 'ಸುದೀಪ್ತವಾದ ಅಗ್ನಿಯ ದೆಸೆಯಿಂದ ಅನೇಕಗಳಾದ ಕಿಡಿಗಳು ಹೇಗೆ ಉದ್ಭವಿಸುತ್ತವೋ, ಹಾಗೆ ಅಕ್ಷರದ ದೆಸೆಯಿಂದ ನಾನಾವಿಧ ವಸ್ತುಗಳು ಜನಿಸುತ್ತವೆ, ಅಲ್ಲೇ ಲಯವನ್ನು ಹೊಂದುತ್ತವೆ' ಎಂದು ಅಕ್ಷರಕ್ಕೆ ಜಗದುತ್ಪತ್ತಿ ಲಯಕಾರಣತ್ವವನ್ನು ಪ್ರತಿಪಾದಿಸುವ ಮುಂಡಕಾದಿ ವಾಕ್ಯಗಳಿಗೆ ಶಿವನಲ್ಲಿ ಪರ್ಯವಸಾನವನ್ನು ಬೋಧಿಸುತ್ತದೆ. ಹಾಗೆಯೇ, 'ಅದು ಸವಿತೃವಿನ ವರೇಣ್ಯವು' ಎಂದು ನಿರೂಪಿಸುವ ಭಾಗವು, ಸವಿತೃಮಂಡಲ-ಮಧ್ಯವರ್ತಿಯಾದ ಪರಮೇಶ್ವರನಲ್ಲಿ, ಜಗತ್ಕಾರಣನಲ್ಲಿಯೇ ಇರತಕ್ಕ ಸರ್ವಾಂತರ್ಯಾಮಿತ್ವಲಿಂಗವನ್ನು 'ಯಾರು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸುವನೋ' ಎಂದು ಪ್ರತಿಪಾದಿಸುವ ಸವಿತೃದೇವತಾಕ ಗಾಯತ್ರಿಗೆ ಶಿವನಲ್ಲಿ ಪರ್ಯವಸಾನವನ್ನು ತಿಳಿಸುವುದು. ಮತ್ತು 'ಅವನ ದೆಸೆಯಿಂದ ಪುರಾತನಪ್ರಜ್ಞೆಯು ಪ್ರಸವಿಸಿತು' ಎಂದು ಹೇಳುವ ಭಾಗವು, ಸೃಷ್ಟಿಕರ್ತನು ಸೃಷ್ಟಿಗೆ ಪೂರ್ವದಲ್ಲಿ ಸೃಷ್ಟಿವಿಷಯದಲ್ಲಿ ಆಲೋಚನೆ ಮಾಡಿದುದಾಗಿ ಪ್ರತಿಪಾದಿಸುವ ಛಾಂದೋಗ್ಯಾದಿ ವಾಕ್ಯಗಳಿಗೆ ಶಿವನಲ್ಲೇ ಪರ್ಯವಸಾನವನ್ನು ತೋರಿಸುತ್ತದೆ. ಈ ರೀತಿಯಾಗಿ ಸರ್ವಕಾರಣವಾಕ್ಯಗಳಿಗೂ ಶಿವವಿಷಯಕತ್ವವನ್ನು ನಿರ್ಧಾರಿಸುತ್ತಿರುವ ಈ ಶ್ವೇತಾಶ್ವತರ ಮಂತ್ರಕ್ಕೆ ನಾರಾಯಣಪರತ್ವವು ಹೇಗೆ ಕೂಡಬಹುದು? ಆದುದರಿಂದ ಇದರ ಪುರೋವಾದವಾಕ್ಯಗಳು ಕೂಡ ಶಿವಪರವೇ ಎಂದು ಹೇಳಬೇಕು.*

**ಸಮಾಧಾನ:** ಮೇಲೆ ಹೇಳಿದ ಶ್ವೇತಾಶ್ವತರ ಮಂತ್ರವು ವಿಷ್ಣುಪರವಾಗುವುದರಲ್ಲಿ ಯಾವ ದೋಷವೂ ಇರುವುದಿಲ್ಲ. ಆ ಮಂತ್ರದಲ್ಲಿರುವ ಶಿವ ಶಬ್ದವು ಯೋಗವೃತ್ತಿಯಿಂದ ವಿಷ್ಣುಪರವಾಗುತ್ತದೆ. ಇತರಪಕ್ಷದಲ್ಲಿ ಇದ್ದಂತೆ ಲಕ್ಷಣಾದೋಷವಿಲ್ಲ. ಈ ವಾಕ್ಯಕ್ಕೆ ಸಮಗ್ರಕ್ಕೂ ಅನುವಾದತ್ವ ಬರಬೇಕಾಗುತ್ತದೆ ಎಂಬ ದೋಷವೂ ಇರುವುದಿಲ್ಲ. ಸುಬಾಲಾದಿ ವಾಕ್ಯಗಳಲ್ಲಿ ನಾರಾಯಣನಿಗೆ ತಮೋಧಿಷ್ಠಾತೃತ್ವವು ಉಕ್ತವಾಗಿರುವುದರಿಂದ ನಾರಾಯಣನಿಗೆ ಅಮಂಗಳತ್ವ ಶಂಕೆಯು ಬರಬಹುದು. ತಮಸ್ಸೆಂಬುದು ಅತ್ಯಂತ ಹೇಯವಾದುದು. 'ಅದರ ಸಂಬಂಧವುಳ್ಳವನಿಗೆ ಸುಖವಿಲ್ಲ, ಭಯವುಂಟು' ಎಂಬುದಾಗಿ ಅನೇಕ ವಚನಗಳಿಂದ ತಮಸ್ಸಿಗೆ ಬಹುದೋಷಯುಕ್ತತ್ವವು ಪ್ರತಿಪಾದಿಸಲ್ಪಟ್ಟಿರುವುದು ಸುಪ್ರಸಿದ್ಧವೇ. ಆದಕಾರಣ ಅಂತಹ ತಮಸ್ಸಿಗೆ ಅಧಿಷ್ಠಾತೃವಾದುದರಿಂದ ನಾರಾಯಣನೂ ಅಮಂಗಳನಾಗಬಹುದೆಂದು ಶಂಕೆ ಬಂದರೆ, ಅದನ್ನು ಪರಿಹರಿಸಿ ತಮಸ್ಸಂಬಂಧ ವಿದ್ದರೂ ನಾರಾಯಣನು ಪರಮಮಂಗಳನೆಂದು ಈ ಮಂತ್ರದಿಂದ ವಿಧಿಸಲ್ಪಡುತ್ತದೆ. ಆದುದರಿಂದ ಈ ಮಂತ್ರವು ನಾರಾಯಣಪರವಾದರೆ ಪುರೋವಾದವಾಕ್ಯಗಳಿಂದ ಲಬ್ಧವಾಗದ ಅರ್ಥವೇ ಈ ಮಂತ್ರಕ್ಕೆ ಇಲ್ಲದೇ ಹೋಗಬೇಕೆಂಬ ದೋಷವು ನಮ್ಮ ಪಕ್ಷದಲ್ಲಿ ಬರುವುದಿಲ್ಲ. ಅಲ್ಲದೇ ಶಿವಪರತ್ವವನ್ನು ಹೇಳುವವರು ಹೇಗೆ ಶಿವನಿಗೆ ನಾರಾಯಣಾದಿ ಶಬ್ದಬೋಧ್ಯತ್ವವು ಈ ವಾಕ್ಯಕ್ಕೆ ಅಭಿಪ್ರೇತವೆಂದು ಹೇಳುವರೋ, ಹಾಗೆಯೇ ನಮ್ಮ ಪಕ್ಷದಲ್ಲಿಯೂ ಪುರೋವಾದ ವಾಕ್ಯಗಳಲ್ಲಿ ಬೋಧಿತನಾದ ತಮೋಧಿಷ್ಠಾತೃವಾದ ನಾರಾಯಣನಲ್ಲಿ ಶಿವಶಬ್ದವಾಚ್ಯತ್ವವನ್ನು , ಶಿವ-ಪರ್ಯಾಯಗಳಾದ ಅನೇಕ ಶಬ್ದಗಳಿಗೂ ಮತ್ತು ಕಾರಣವಾಕ್ಯಗಳಲ್ಲಿರುವ ಇತರ ದೇವತಾ ವಾಚಕಪದಗಳಿಗೂ ನಾರಾಯಣವಾಚಕತ್ವವು

ಸಿದ್ಧಿಸುವುದಕ್ಕಾಗಿ, ಈ ಮಂತ್ರವು ವಿಧಿಸುತ್ತದೆ ಎಂದು ಹೇಳಬಹುದಾಗಿರುತ್ತದೆ. ಆದುದರಿಂದ ವೈಯರ್ಥ್ಯದೋಷವಿಲ್ಲ. ಮೇಲೆ ಹೇಳಿದ ರೀತಿಯಿಂದ ಪೂರ್ವಾರ್ಧವು ನಾರಾಯಣಪರವಾಗಲಾಗಿ, ಉತ್ತರಾರ್ಧವು, ನೀವು ಹೇಳುವ ರೀತಿಯಿಂದ ಜಗತ್ಕಾರಣ ಪ್ರತಿಪಾದಕವಾಕ್ಯ-ಗಳಿಗೆಲ್ಲ ನಾರಾಯಣನಲ್ಲಿಯೇ ಪರ್ಯವಸಾನವನ್ನು ತಿಳಿಸುತ್ತದೆ.

ಈ ಮಂತ್ರವು ಕಾರಣವಾಕ್ಯಗಳಲ್ಲಿರುವ ನಾರಾಯಣಾದಿ ಶಬ್ದಗಳಿಗೆ ಶಿವಪರತ್ವವನ್ನು ವಿಧಿಸುತ್ತದೆಂದು ಹೇಳುವುದರಲ್ಲಿಯೇ ಅನೇಕ ಅನುಪಪತ್ತಿಗಳಿವೆ. ಶಿವಶಬ್ದವು ಕೋಶದಿಂದ ಮಂಗಳದಲ್ಲಿಯೂ, ರುದ್ರನಲ್ಲಿಯೂ ಶಕ್ತವೆಂದು ಸಿದ್ಧಿಸುತ್ತದೆ. ಈ ಶ್ವೇತಾಶ್ವತರ ಮಂತ್ರದಲ್ಲಿರುವ ಶಿವಶಬ್ದವು ಮಂಗಳಾರ್ಥಕವೋ ರುದ್ರಾರ್ಥಕವೋ ಎಂಬುದರಲ್ಲಿ ಒಂದನ್ನು ನಿರ್ಧಾರಿಸಲು ವಿಶೇಷ ಹೇತುವಿಲ್ಲ. ಹೀಗಿರುವಾಗ ಇಂತಹ ಶಿವಶಬ್ದದ ಬಲದಿಂದ ಸಕಲ ಕಾರಣವಾಕ್ಯಗಳಿಗೂ ರುದ್ರನಲ್ಲಿಯೇ ಪರ್ಯವಸಾನವನ್ನು ಈ ಮಂತ್ರವು ಬೋಧಿಸುತ್ತದೆಂದು ಹೇಳುವುದು ಯುಕ್ತವಲ್ಲ. ಮತ್ತು ಮಹೋಪನಿಷತ್ತಿನಲ್ಲಿ 'ನಾರಾಯಣನೊಬ್ಬನೇ ಇದ್ದನು. ಬ್ರಹ್ಮನಿರಲಿಲ್ಲ. ಈಶಾನನಿರಲಿಲ್ಲ' ಎಂದು ಸೃಷ್ಟಿಗೆ ಪೂರ್ವದಲ್ಲಿ ಶಿವನ ಇರುವಿಕೆಯು ನಿಷೇಧಿಸಲ್ಪಟ್ಟಿದೆ. ನಾರಾಯಣೋಪನಿಷತ್ತಿನಲ್ಲಿ 'ನಾರಾಯಣನ ಲಲಾಟದ ದೆಸೆಯಿಂದ ತ್ರ್ಯಕ್ಷನೂ, ಶೂಲಪಾಣಿಯೂ ಆದ ಪುರುಷನು ಜನಿಸಿದನು' ಎಂದು ನಾರಾಯಣೋತ್ಪನ್ನತ್ವವನ್ನು ಶಿವನಿಗೆ ಹೇಳಿರುವುದರಿಂದ ಶಿವನು ಆದಿಯಲ್ಲಿ ಇರಲಿಲ್ಲವೆಂದು ಸಿದ್ಧಿಸುತ್ತದೆ. ಶಿವನು ಇಲ್ಲದಿದ್ದ ಕಾಲದಲ್ಲಿ ಇದ್ದು , ಶಿವನನ್ನು ಹುಟ್ಟಿಸಿದವನಲ್ಲಿ ಪ್ರಯೋಗಿಸಲ್ಪಟ್ಟಿರುವ ನಾರಾಯಣಶಬ್ದಕ್ಕೆ ನಾರಾಯಣಜನ್ಯನಾದ ಶಿವನಲ್ಲಿ ಪರ್ಯವಸಾನವನ್ನು ತಮೋಧಿಷ್ಠಾತೃತ್ವವನ್ನು ಕೂಡ ಹೇಳಿದರೆ ವಾಕ್ಯಗಳಿಗೆ ವಿರೋಧವೇ ಬರುವುದು ಹೊರತು ಸಾಮಂಜಸ್ಯವಾಗುವುದಿಲ್ಲ. ಇನ್ನೂ ಅನುಪಪತ್ತಿಗಳು ಬಹುಳವಾಗಿವೆ. ವಿಸ್ತಾರಭಯದಿಂದ ಸಂಕ್ಷೇಪ ಮಾಡಲ್ಪಟ್ಟಿದೆ.

**ಪೂರ್ವಪಕ್ಷ:-** *ಮೇಲೆ ಹೇಳಿದ ಶ್ವೇತಾಶ್ವತರವಾಕ್ಯಕ್ಕೆ ನಾರಾಯಣಪರತ್ವವನ್ನು ಹೇಳುವ ಪಕ್ಷದಲ್ಲಿ ಅದೇ ಉಪನಿಷತ್ತಿನಲ್ಲಿರುವ ಅನೇಕ ಮಂತ್ರಗಳ ವಿರೋಧವು ಬರುತ್ತದೆ. ಹೇಗೆಂದರೆ:- ಈ ಉಪನಿಷತ್ತು ಆದಿಯಿಂದ ಈಶ, ರುದ್ರ, ಶಿವ, ಈಶಾನ, ಮಹೇಶ್ವರಾದಿ ಪದಗಳಿಂದ ಬೋಧ್ಯನಾದವನಿಗೆ ಸರ್ವಕಾರಣತ್ವವನ್ನು ಸರ್ವಾಧಿಷ್ಠಾತೃತ್ವವನ್ನು ಪ್ರತಿಪಾದಿಸುತ್ತಲೇ ಕೊನೆಗಂಡಿದೆ. ಈ ಶಬ್ದಗಳು ಕೋಶಾದಿ ಬಲದಿಂದ ರೂಢಗಳಾಗಿ ಶಿವವಾಚಕಗಳಾಗಿರುತ್ತವೆ. ಬಾಧಕವಿಲ್ಲದೇ ರೂಢಿಯನ್ನು ತ್ಯಜಿಸಿ ಯೋಗವೃತ್ತಿಯಿಂದ ಆ ಪದಗಳಿಗೆ ನಾರಾಯಣಪರತ್ವವನ್ನು ಕಲ್ಪಿಸುವುದು ಯುಕ್ತವಲ್ಲ. ಅಲ್ಲದೇ ಇದೇ ಉಪನಿಷತ್ತಿನ 3ನೇಯ ಅಧ್ಯಾಯದ 4ನೇಯ ಮಂತ್ರದಲ್ಲಿ 'ದೇವತೆ ಪ್ರಥಮನು, ಉದ್ಭವನು, ವಿಶ್ವಾಧಿಕನು, ಮಹರ್ಷಿಯು ಆದ ರುದ್ರನು ಆದಿಯಲ್ಲಿ ಹಿರಣ್ಯಗರ್ಭನನ್ನು ಹುಟ್ಟಿಸಿದನೋ, ಅವನು ನಮ್ಮನ್ನು ಶುಭವಾದ ಬುದ್ಧಿಯಿಂದ ಸಂಯುಕ್ತರನ್ನು ಮಾಡಲಿ' ಎಂದು ಪ್ರತಿಪಾದಿತವಾಗಿರುವುದರಿಂದ ರುದ್ರನು ಹಿರಣ್ಯಗರ್ಭನಿಗೆ ಜನಕನೆಂದು ಸಿದ್ಧವಾಗುತ್ತದೆ. ಸರ್ವಜಗಜ್ಜನಕ ನಾದ ಹಿರಣ್ಯಗರ್ಭನೆಂಬುವ ಬ್ರಹ್ಮನಿಗೆ ಜನಕನಾದುದರಿಂದಲೂ ಶಿವನು ಜಗತ್ಕಾರಣನೆಂದು ಹೇಳಬೇಕಾಗುತ್ತದೆ. ಆದರೆ ಬ್ರಹ್ಮಜನಕತ್ವವು ಮಹೋಪನಿಷನ್ನಾರಾಯಣೋಪನಿಷತ್ತುಗಳಲ್ಲಿ ನಾರಾಯಣನಲ್ಲೇ ಪ್ರತಿಪಾದಿತವಾಗಿರುವುದರಿಂದ ಇಲ್ಲಿರುವ ಈಶಾದಿ ಶಬ್ದಗಳು ಸರ್ವ-ವೇದಾಂತಪ್ರತ್ಯಯನ್ಯಾಯದಿಂದ(ಅಂದರೆ ಎಲ್ಲಾ ವೇದಾಂತವಾಕ್ಯಗಳೂ ಒಂದೇ ಅರ್ಥವನ್ನು ಬೋಧಿಸುತ್ತವೆಯೆಂದು ಬ್ರಹ್ಮಸೂತ್ರೋಕ್ತವಾದ ನ್ಯಾಯದಿಂದ) ನಾರಾಯಣಪರಗಳೇ ಆಗಿರುತ್ತವೆಯೆಂದು ಎನ್ನಕೂಡದು. ಆ ಉಪನಿಷತ್ತುಗಳಲ್ಲಿರುವ ನಾರಾಯಣಶಬ್ದವೇ ಸರ್ವವೇದಾಂತ ಪ್ರತ್ಯಯನ್ಯಾಯದಿಂದ ಶಿವಪರವೂ ಆಗಬಹುದಾಗಿರುತ್ತದೆ. ಆದಕಾರಣ ನಾರಾಯಣನೇ ಸರ್ವಜಗತ್ಕಾರಣನಾದುದರಿಂದ ಸರ್ವೋತ್ತಮ-ನೆಂದು ಹೇಳುವುದು ಸರಿಯಲ್ಲ.*

**ಸಮಾಧಾನ:-** ಕಠೋಪನಿಷತ್ತಿನ 2-15ನೆಯ ಮಂತ್ರದಲ್ಲಿ 'ಸರ್ವವೇದಗಳೂ ಯಾವ ಪದವನ್ನು ತಿಳಿಸುತ್ತವೆಯೋ' ಎಂದು ಹೇಳಿರುವ ಪ್ರಕಾರದಿಂದಲೂ, ಸರ್ವವೇದಾಂತಪ್ರತ್ಯಯನ್ಯಾಯದಿಂದಲೂ, ಸರ್ವಶ್ರುತಿಗಳಿಗೂ ಏಕವಿಷಯತ್ವರೂಪವಾದ ಅವಿರೋಧದ ಸಂಪಾದನವು ಅವಶ್ಯಕವು. ಅಂತಹ ಅವಿರೋಧವು ಶ್ರುತಿಗಳಲ್ಲಿರುವ ನಾರಾಯಣನಲ್ಲಿ ಅಸಾಧಾರಣವಾಗಿ ರೂಢಶಬ್ದಗಳಿಗೆಲ್ಲಾ ಶಿವಪರತ್ವವನ್ನು ಒಪ್ಪಿಯೊ, ಶಿವನಲ್ಲಿ ಅಸಾಧಾರಣವಾಗಿ ರೂಢವಾದ ಶಬ್ದಗಳಿಗೆಲ್ಲಾ ನಾರಾಯಣಪರತ್ವವನ್ನು ಆಶ್ರಯಿಸಿಯೋ, ಇಬ್ಬರಲ್ಲೊಬ್ಬರು ಮತ್ತೊಬ್ಬರಿಗೆ ಅಧೀನ ಕಾರಣರೆಂದಂಗೀಕರಿಸಿಯೋ ಪಡೆಯತಕ್ಕುದೇ ಹೊರತು, ಇನ್ನು ಬೇರೆ ಮಾರ್ಗವಿಲ್ಲ. ನಾರಾಯಣನಲ್ಲಿ ರೂಢವಾದ ಪದಗಳಿಗೆ ಶಿವಪರತ್ವ ವನ್ನಾಶ್ರಯಿಸಿದರೆ ಶ್ರುತಿಗಳಿಗೆ ಅವಿರೋಧ ಸಿದ್ಧಿಯಾಗುವುದಿಲ್ಲ. ಮಹೋಪನಿಷತ್ತು, ನಾರಾಯಣೋಪನಿಷತ್ತು, ಸುಬಾಲೋಪನಿಷತ್ತು ಮತ್ತು

ಬೃಹದಾರಣ್ಯಕೋಪನಿಷತ್ತು ಮೊದಲಾದವುಗಳಲ್ಲಿ ಪ್ರಸಿದ್ಧಶಿವನು ಇತರದೇವತೆಗಳಂತೆ ನಾರಾಯಣನ ದೆಸೆಯಿಂದ ಹುಟ್ಟಿ ಅವನಿಗೆ ಅಧೀನ - ನಾಗಿದ್ದಾನೆಯೆಂದು ಪ್ರತಿಪಾದಿತವಾಗಿರುವುದರಿಂದ ಅವುಗಳ ವಿರೋಧವೇ ಬರುತ್ತದೆ.

ಈ ಶ್ವೇತಾಶ್ವತರೋಪನಿಷತ್ತಿನಲ್ಲಿಯೇ ಪ್ರಥಮಾಧ್ಯಾಯದ 8ನೇಯ ಮಂತ್ರದಲ್ಲಿ ಕ್ಷರಾಕ್ಷರ, ವ್ಯಕ್ತಾವ್ಯಕ್ತರೂಪವಾದ ಸಕಲಜಗತ್ತನ್ನು ಈತನು ಭರಿಸುತ್ತಾನೆಂದು ಪ್ರತಿಪಾದಿತವಾಗಿದೆ. ವಿಷ್ಣುವಿನ ಅಸಾಧಾರಣ ಧರ್ಮವಾದ ಜಗತ್ಪಾಲನರೂಪಭರಣಕರ್ತೃತ್ವವನ್ನು ಹೇಳಿರುವು-ದರಿಂದ ಇಲ್ಲಿ ಉಕ್ತನಾದ ಈಶನು ಪ್ರಸಿದ್ಧಶಿವನಲ್ಲವೆಂದು ಹೇಳಬೇಕಾಗಿದೆ. ಅದಲ್ಲದೇ ಅದೇ ಅಧ್ಯಾಯದ 10ನೇಯ ಮಂತ್ರವು 'ಕ್ಷರವು ಪ್ರಧಾನವು, ಅಮೃತಾಕ್ಷರವು ಹರನು, ಕ್ಷರಾತ್ಮರನ್ನು ಒಬ್ಬ ದೇವನು ನಿಯಮಿಸುತ್ತಾನೆ' ಎಂದು ಹರಶಬ್ದಿತವಾದ ಅಕ್ಷರವನ್ನು ನಿಯಮ್ಯಕೋಟಿಯಲ್ಲಿ ಸೇರಿಸಿ, ನಿಯಾಮಕನಾದ ದೇವನು ಬೇರೆ ಇದ್ದಾನೆ ಎಂದು ತಿಳಿಸುತ್ತದೆ. ಇದರಿಂದೂ, 8ನೆಯ ಮಂತ್ರದಲ್ಲಿ ಉಕ್ತನಾದ ಈಶನು ಪ್ರಸಿದ್ಧ ಶಿವನಲ್ಲ ವೆಂದು ಸಿದ್ಧಿಸುವುದು. ಇದಲ್ಲದೇ 3-11ನೆಯ ವಾಕ್ಯದಲ್ಲಿ 'ಮಹಾಪುರುಷನು ಸತ್ತ್ವಕ್ಕೆ ಪ್ರವರ್ತಕನು' ಎಂದು ಸತ್ತ್ವಗುಣಪ್ರವರ್ತಕತ್ವ-ರೂಪವಾದ ವಿಷ್ಣುಲಿಂಗವೂ ಪ್ರತಿಪಾದಿತವಾಗಿದೆ. ಮತ್ತು 6ನೇಅಧ್ಯಾಯದ 6ನೇಯ ಮಂತ್ರದಲ್ಲಿ, ಧರ್ಮಾವಹನು, ಪಾಪಪರಿಹಾರಕನೂ ಆದ ಭಗೇಶನನ್ನು ಅರಿತು ಫಲವನ್ನು ಹೊಂದುವುದಾಗಿ ಉಕ್ತವಾಗಿದೆ. ಇಲ್ಲಿರುವ ಭಗೇಶಶಬ್ದವು ಭಗವಚ್ಛಬ್ದಪರ್ಯಾಯವು, 'ಭಗವಚ್ಛಬ್ದದಿಂದ ವಾಚ್ಯನು ಮುಕುಂದನನ್ನು ಬಿಟ್ಟು ಮತ್ತು ಯಾರೂ ಇಲ್ಲ' ಎಂದು ಭಾಗವತದಲ್ಲಿ ಉಕ್ತವಾಗಿರುವುದರಿಂದ ಭಗೇಶನು ನಾರಾಯಣನೇ ಎಂದು ಸಿದ್ಧವಾಗುತ್ತದೆ. ಆದುದರಿಂದ ಶ್ವೇತಾಶ್ವತರೋಪನಿಷತ್ತಿನಲ್ಲೇ ಶಿವನಿಗೆ ಸಕಲಜಗತ್ಕಾರಣತ್ವವು ಪ್ರತಿಪಾದಿತವಾಗಿದೆಯೆಂದು ಹೇಳಲು ಸಾಧ್ಯವಲ್ಲವಾದ ಕಾರಣ ನಾರಾಯಣಾದಿ ಶಬ್ದಗಳಿಗೆ ಶಿವಪರತ್ವವನ್ನು ಅವಲಂಬಿಸಿ ಶ್ರುತಿಗಳಿಗೆ ಅವಿರೋಧಚಿಂತನೆಯು ಶಕ್ಯವಲ್ಲ.

ಶಿವನಲ್ಲಿ ಮತ್ತು ಇತರದೇವತೆಗಳಲ್ಲಿಯೂ ರೂಢವಾದ ಶಬ್ದಗಳಿಗೆಲ್ಲಾ ನಾರಾಯಣಪರತ್ವವನ್ನು ಮತ್ತು ಶಿವನಿಗೆ ನಾರಾಯಣಾಧೀನತ್ವ ವನ್ನು ಒಪ್ಪುವ ಪಕ್ಷದಲ್ಲಿ ಶ್ರುತಿಗಳಿಗೆ ಅವಿರೋಧದಿಂದ ಏಕವಿಷಯಕತ್ವವು ಸಿದ್ಧಿಯಾಗುತ್ತದೆ. ಬ್ರಹ್ಮರುದ್ರಾದಿಗಳಿಗೆ ಸೃಷ್ಟ್ಯಾದಿಕಾಲದಲ್ಲಿ ಅಭಾವವನ್ನು ತಿಳಿಸುವ ಮಹೋಪನಿಷದಾದಿ ವಾಕ್ಯಗಳಿದ್ದಂತೆ ನಾರಾಯಣನಿಗೆ ಸೃಷ್ಟ್ಯಾದಿಯಲ್ಲಿ ಅಭಾವವನ್ನು ತಿಳಿಸುವ ಶ್ರುತಿಯು ಎಲ್ಲಿಯೂ ಕಂಡುಬಂದಿರುವುದಿಲ್ಲ.

ಅಲ್ಲದೇ, ಶಿವನಿಗೆ ಸರ್ವೋತ್ತಮತ್ವ ವಿಷಯದಲ್ಲಿ ಶ್ವೇತಾಶ್ವತರೋಪನಿಷತ್ತು ಪ್ರಮಾಣವಾಗುವುದಿಲ್ಲವೆಂದು ಮೇಲೆ ನಿರೂಪಿತವಾಯಿತಷ್ಟೆ. ವಿಷ್ಣುಪರವಾಗುವುದರಲ್ಲೇ ಆ ಉಪನಿಷತ್ತಿಗೆ ಅನುಗುಣ್ಯವಿದೆಯೆಂತಲೂ ಹೇಳಬೇಕಾಗಿದೆ. ಹೇಗೆಂದರೆ- ಆ ಉಪನಿಷತ್ತಿನಲ್ಲಿ 1ನೇ ಅಧ್ಯಾಯದ 8ನೇಯ ಮಂತ್ರದಲ್ಲಿ ಹೇಳಲ್ಪಟ್ಟ ಈಶನು, 10ನೇ ಮಂತ್ರದಲ್ಲಿ ಕ್ಷರಾಕ್ಷರನಿಯಾಮಕನೆಂದು ಉಕ್ತನಾದ ದೇವನು ಪ್ರಸಿದ್ಧಶಿವನಲ್ಲವೆಂದು ನಿರೂಪಿತವಾದುದು ಸರಿಯಷ್ಟೆ. ಆ ಈಶನು ದೇವನು ಸಹ ವಿಷ್ಣುವೇ ಎಂದೊಪ್ಪಿದರೆ 8ನೇಯಮಂತ್ರದಲ್ಲಿ ಉಕ್ತವಾಗಿರುವ ಜಗತ್ಪಾಲಕತ್ವವು ಕೂಡುತ್ತದೆ. ವಿಷ್ಣುಪರವೆಂದು ಅನೇಕ ಪ್ರಮಾಣಸಿದ್ಧವಾದ ಪುರುಷಸೂಕ್ತದ ಆದಿಮಂತ್ರಗಳಿಗೆ 3ನೇ ಅಧ್ಯಾಯದ 14,15ಮಂತ್ರಗಳಾಗಿ ಆಮ್ನಾನವು ಉಪಪನ್ನವಾಗುತ್ತದೆ. ಭಗವಚ್ಛಬ್ದಪರ್ಯಾಯವಾದ ಭಗೇಶಶಬ್ದದ ಪ್ರಯೋಗವು ಕೂಡುತ್ತದೆ. ನಾರಾಯಣಜನ್ಯನೆಂದು ಪ್ರಮಾಣಸಿದ್ಧವಾದ ಶಿವನಲ್ಲಿ ಕೂಡದೇ ಇರುವ ಜನಕರಾಹಿತ್ಯಕ್ಕೂ ಅಧಿಪರಾಹಿತ್ಯಕ್ಕೂ 6-9ನೆಯ ವಾಕ್ಯದಲ್ಲಿ ಹೇಳುವಿಕೆಯು ಯುಕ್ತವಾಗುತ್ತದೆ. 6ನೇಯ ಅಧ್ಯಾಯದ 7ನೇಯ ಮಂತ್ರದಲ್ಲಿ 'ಈಶ್ವರರಲ್ಲಿ ಪರಮನಾದ ಮಹೇಶ್ವರನನ್ನು' ಎಂದು ಹೇಳುವಿಕೆಯು ಸಂಗತವಾಗುತ್ತದೆ. ''ಶಿವಶ್ಶೂಲೀಮಹೇಶ್ವರಃ'' ಎಂದು ಅಮರಾದಿಕೋಶಾನುಸಾರವಾಗಿ ಯೋಗರೂಢವಾದ ಮಹೇಶ್ವರಪದದಿಂದ ನಿರವಧಿಕೈಶ್ವರ್ಯವಂತ-ನಾದ ಶಿವನ ಬೋಧವಾಗುತ್ತಿರಲಾಗಿ ಇನ್ನೂ ಆಧಿಕ್ಯವನ್ನು ತಿಳಿಸುವ 'ಪರಮಂ' ಎಂಬ ವಿಶೇಷಣವು ವ್ಯರ್ಥವಾಗುತ್ತದೆ. ವಿಷ್ಣುಪಕ್ಷದಲ್ಲಿ ಮಹೇಶ್ವರನೆಂದು ಪ್ರಸಿದ್ಧನಾದ ಶಿವನಿಗಿಂತಲೂ ಅಧಿಕನೆಂದು ತಿಳಿಸುತ್ತಾದದರಿಂದ ಆ ವಿಶೇಷಣವು ಸಾರ್ಥಕವಾಗುತ್ತದೆ. ವಿಷ್ಣುಮಾತ್ರಧರ್ಮ-ವಾದ ಸತ್ವಗುಣಪ್ರವರ್ತಕತ್ವದ ಆಮ್ನಾನವೂ ಉಪಪನ್ನವಾಗುತ್ತದೆ.

ಸತ್ವಗುಣಪ್ರವರ್ತಕತ್ವವು ನಾರಾಯಣನ ಧರ್ಮವೇ ಮತ್ತೆ ಯಾರಧರ್ಮವಲ್ಲವೆಂಬುದು ಕೆಳಗೆ ಹೇಳುವ ಪ್ರಮಾಣಗಳಿಂದ ಸಿದ್ಧವು. ಮೈತ್ರಾಯಣೀಯೋಪನಿಷತ್ತಿನಲ್ಲಿ ಬ್ರಹ್ಮನು ರಾಜಸನೆಂತಲೂ, ವಿಷ್ಣುವು ಸಾತ್ವಿಕನೆಂತಲೂ, ಶಿವನು ತಾಮಸನೆಂತಲೂ ಸ್ಪಷ್ಟವಾಗಿ ಹೇಳಿ ವಿಷ್ಣುವಿಗೆ ಸತ್ತ್ವಗುಣಪ್ರವರ್ತಕತ್ವವು ಉಕ್ತವಾಗಿದೆ. ಇದೇ ರೀತಿಯಾಗಿ ವರಾಹಪುರಾಣದಲ್ಲಿ ಅಗಸ್ತ್ಯ-ವರಾಹ ಸಂವಾದ ಪ್ರಕರಣದಲ್ಲಿ, ಹಾಗೆಯೇ

ಲಿಂಗಪುರಾಣದಲ್ಲಿ 14,24,25ನೆಯ ಅಧ್ಯಾಯಗಳಲ್ಲಿಯೂ ವಿಷ್ಣುವಿಗೆ ಸತ್ತ್ವಪ್ರವರ್ತಕತ್ವವು ಉಕ್ತವಾಗಿದೆ. ಇನ್ನೂ ಪುರಾಣಾಂತರಗಳಲ್ಲಿ, ಸಾತ್ವಿಕರಿಂದ ವಿಷ್ಣುವು, ರಾಜಸರಿಂದ ಬ್ರಹ್ಮನು, ತಾಮಸರಿಂದ ಶಿವನು, ಸಂಕೀರ್ಣರಿಂದ ಸರಸ್ವತಿಯು ಉಪಾಸ್ಯರೆಂದು ಹೇಳಲ್ಪಟ್ಟಿರುವುದರಿಂದ ''ಸ್ವಾಮಿ ಎಂತಹವನೋ ಪ್ರಜೆಗಳು ಅಂತಹವರು'' ಎಂಬ ಲೋಕನ್ಯಾಯದ ಅನುಸರಣೆಯಿಂದಲೂ ಸಾತ್ವಿಕೋಪಾಸ್ಯನಾದ ವಿಷ್ಣುವು ಸತ್ತ್ವಪ್ರವರ್ತಕನೆಂದು ಸಿದ್ಧವಾಗುತ್ತದೆ.

ಶ್ವೇತಾಶ್ವತರೋಪನಿಷತ್ತಿನ 3ನೇಯ ಅಧ್ಯಾಯದ 4ನೇಯ ಮಂತ್ರವು ಹಿರಣ್ಯಗರ್ಭಜನಕತ್ವವನ್ನು ಶಿವನಿಗೆ ಹೇಳುತ್ತದೆಯಾದುದರಿಂದ ಶಿವನು ಸರ್ವಜಗತ್ಕಾರಣನೆಂಬುದು ಸರಿಯಲ್ಲ. ಆ ಮಂತ್ರದಲ್ಲಿ ಯಚ್ಛಬ್ದವಿರುವುದರಿಂದ ವಾಕ್ಯಾಂತರೋಕ್ತವಾದ ಹಿರಣ್ಯಗರ್ಭಜನಕತ್ವವು ಈ ಮಂತ್ರದಿಂದ ಅನುಪದಿಸಲ್ಪಡುತ್ತದೆಯೇ ಹೊರತು ವಿಧಿಸಲ್ಪಡುವುದಿಲ್ಲ. ವಾಕ್ಯಾಂತರಗಳೆಂದರೆ, ಮಹೋಪನಿಷತ್ತು, ನಾರಾಯಣೋಪನಿಷತ್ತು ಮೊದಲಾದುದರಲ್ಲಿರುವ ವಚನಗಳು ನಾರಾಯಣನೇ ಹಿರಣ್ಯಗರ್ಭನಾದ ಬ್ರಹ್ಮನಿಗೂ ಶಿವನಿಗೂ ಜನಕನೆಂದು ತಿಳಿಸುತ್ತವಾದ ಕಾರಣ ತದ್ವಿರುದ್ಧವಾಗಿ ಶಿವನಿಗೆ ಹಿರಣ್ಯಗರ್ಭಜನಕತ್ವವು ಅಪ್ರಾಮಾಣಿಕವೇ. ವಿಧಾಯಕವಾಕ್ಯಗಳಲ್ಲಿರುವ ನಾರಾಯಣಪದವೇ ಶಿವಪರವಾಗಲಿ ಎಂಬುದಾದರೂ ಅತ್ಯಂತಾಸಂಗತವು. ಆದಕಾರಣ ನಾರಾಯಣನೇ ಶಿವಾದಿಸರ್ವಶಬ್ದವಾಚ್ಯನಾಗಿ ಸಕಲವೇದವಾಕ್ಯಗಳಿಂದಲೂ ಸರ್ವ-ಜಗತ್ಕಾರಣನಾಗಿ ಪ್ರತಿಪಾದಿತನಾಗಿರುತ್ತಾನೆಯಾದುದರಿಂದ ಸರ್ವೋತ್ತಮನೆಂದು ನಿರ್ಬಾಧವಾಗಿ ಸಿದ್ಧಿಸುತ್ತದೆ.

***ಪೂರ್ವಪಕ್ಷ:-*** *ದೇವತಾಂತರದಲ್ಲಿ ರೂಢಗಳಾದ ನಾರಾಯಣಾದಿ ಪದಗಳಿಗೆಲ್ಲಾ ಶಿವಪರತ್ವವನ್ನು ಅಂಗೀಕರಿಸಿ, ಸಮಸ್ತಕಾರಣವಾಕ್ಯಗಳಿಂದ ಶಿವನೇ ಜಗತ್ಕಾರಣನೆಂದು ಸಿದ್ಧವಾಗುತ್ತದೆ ಎಂದು ಹೇಳುವುದಕ್ಕೆ ಮೇಲೆ ಹೇಳಿದ ಯಾವ ಬಾಧಕವೂ ಬರುವುದಿಲ್ಲ . ಪರಮಶಿವನು, ಗುಣಶಿವನು ಎಂದು ಶಿವರು ಇಬ್ಬರು. ಪರಮಶಿವನಿಗೆ ಜಗತ್ಕಾರಣತ್ವವು, ಮುಮುಕ್ಷುಜ್ಞೇಯತ್ವವು, ಸರ್ವೋತ್ತಮತ್ವವು ಶ್ರುತ್ಯಾದಿ ಪ್ರಮಾಣ ಸಿದ್ಧವು. ಮಹೋಪನಿಷದಾದಿಗಳಲ್ಲಿ ಸೃಷ್ಟಿಗೆ ಪೂರ್ವದಲ್ಲಿ ಇರಲಿಲ್ಲವೆಂತಲೂ, ಮತ್ತು ನಾರಾಯಣನ ದೆಸೆಯಿಂದ ಜನಿಸಿದನೆಂತಲೂ ಹೇಳಲ್ಪಟ್ಟ ಶಿವನು ಗುಣಶಿವನು. ಆ ಉಪನಿಷತ್ತುಗಳಲ್ಲಿ ನಾರಾಯಣನಿಗೆ ಉಕ್ತವಾಗಿರುವ ಜಗತ್ಕಾರಣತ್ವವನ್ನು ನಾರಾಯಣಶಬ್ದಕ್ಕೆ ಶಿವಪರತ್ವವನ್ನು ಒಪ್ಪಿ ಪರಮಶಿವನಲ್ಲೇ ಸಮನ್ವಯಿಸಬಹುದು. ಅಥವಾ ಕಲ್ಪವಿಶೇಷದಲ್ಲಿ ಪರಮಶಿವನ ದೆಸೆಯಿಂದ ಆದಿಯಲ್ಲಿ ನಾರಾಯಣನು ಉದ್ಭವಿಸಿದನೆಂದೂ ಆತನಿಂದ ಬ್ರಹ್ಮರುದ್ರಾದಿಗಳ ಸೃಷ್ಟಿಯಾಯಿತೆಂದೂ ಹೇಳಬಹುದು. ಈ ರೀತಿಯಾಗಿ ಸರ್ವಕಾರಣವಾಕ್ಯಗಳಿಗೂ ಪರಮಶಿವನಲ್ಲೇ ಪರ್ಯವಸಾನವಾಗುತ್ತಾದಕಾರಣ ನಾರಾಯಣನಿಗೆ ಸರ್ವಜಗತ್ಕಾರಣತ್ವವು ಸಿದ್ಧವಾಗುವುದಿಲ್ಲ.*

**ಸಮಾಧಾನ:-** ನೀವು ಹೇಳುವ ಪ್ರಕಾರದಿಂದ ಪರಮಶಿವನು ಬೇರೆ ಇದ್ದಾನೆ ಎಂಬುವುದರಲ್ಲಿ ಪ್ರಮಾಣವಿರುವುದಿಲ್ಲ. ಪ್ರಮಾಣವಿಲ್ಲದೇ ಶಿವದ್ವೈವಿಧ್ಯವನ್ನು ಕಲ್ಪಿಸಿ ಶ್ರುತಿಸಮನ್ವಯ ಮಾಡುವುದು ನ್ಯಾಯವಲ್ಲ. ಮಹೋಪನಿಷತ್ತು ಮೊದಲಾದವುಗಳಲ್ಲಿ 'ನಾರಾಯಣನೊಬ್ಬನೇ ಇದ್ದನು, ನಾರಾಯಣನಿಂದ ಬ್ರಹ್ಮರುದ್ರಾದಿ ಸರ್ವಜಗತ್ತು ಉದ್ಭವಿಸಿತು' ಎಂದು ಹೇಳಲ್ಪಟ್ಟಿದೆಯೇ ಹೊರತು ನಾರಾಯಣನು ಪರಮಶಿವನಿಂದ ಜನಿಸಿದುದಾಗಿ ಹೇಳಲ್ಪಟ್ಟಿಲ್ಲ. ಅಲ್ಲದೇ , ಇನ್ನು ಯಾವ ಶ್ರುತಿಯಲ್ಲಿಯೂ ನಾರಾಯಣನು ಪರಮಶಿವನಿಂದ ಹುಟ್ಟಿದುದಾಗಿಯಾಗಲೀ, ನಾರಾಯಣನು ಸೃಷ್ಟಿಗೆ ಪೂರ್ವದಲ್ಲಿ ಇರಲಿಲ್ಲವೆಂಬುದಾಗಿಯಾಗಲಿ, ಬ್ರಹ್ಮರುದ್ರಾದಿಗಳು ಇರಲಿಲ್ಲವೆಂದು ಹೇಳಿದಂತೆ ಸ್ಪಷ್ಟವಾಗಿ ಹೇಳಲ್ಪಟ್ಟಿರು-ವುದಿಲ್ಲ. ಅಲ್ಲದೇ, ನಾರಾಯಣಾದಿ ಶಬ್ದಗಳಿಗೆ ಶಿವಪರತ್ವವನ್ನು ಹೇಳುವ ಪಕ್ಷದಲ್ಲಿ ಲಕ್ಷಣಾವೃತ್ತಿಯನ್ನು ಅಂಗೀಕರಿಸಬೇಕಾಗುತ್ತದೆ. ಶಿವಾದಿ ಶಬ್ದಗಳಿಗೆ ವಿಷ್ಣುವಿನಲ್ಲಿ ಯೋಗರೂಢಿಗಳಿಂದ ಪ್ರಯೋಗವು ಕೂಡುತ್ತದೆ. ಸರ್ವಶಬ್ದಗಳೂ ವಿಷ್ಣುವನ್ನು ಮುಖ್ಯವೃತ್ತಿಯಿಂದ ಬೋಧಿಸುತ್ತವೆ ಎಂದು ಶ್ರುತ್ಯಾದಿ ಪ್ರಮಾಣಸಿದ್ಧವಾಗಿರುತ್ತದೆ. ಶಿವನಿಗೆ ಸರ್ವಶಬ್ದವಾಚ್ಯತ್ವವನ್ನು ಪ್ರತಿಪಾದಿಸುವ ಶ್ರುತಿಯು ಎಲ್ಲೂ ಕಂಡುಬರುವುದಿಲ್ಲ. ಮತ್ತು ಶಿವಸರ್ವೋತ್ತಮತ್ವ ಸಿದ್ಧಾಂತಕ್ಕೆ ಮುಖ್ಯಾಧಾರವಾದ ಸ್ಕಾಂದಂತರ್ಗತವಾದ ಸೂತಸಂಹಿತೆಯಲ್ಲಿ 'ಶಿವರುದ್ರಾದಿನಾಮಗಳಿಂದ ವಿಷ್ಣು-ಮೊದಲಾದವರನ್ನು ಧ್ಯಾನಿಸುವವರಿಗೆ ಕ್ರಮವಾಗಿ ಮೋಕ್ಷವಾಗುತ್ತದೆ. ಹರಿವಿಷ್ಣ್ವಾದಿ ನಾಮಗಳಿಂದ ಶಿವನನ್ನು ಚಿಂತಿಸುವವರಿಗೆ ಘೋರ ಸಂಸಾರದಲ್ಲಿ ಪಾತವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ರಾಜನಲ್ಲಿ ಅಮಾತ್ಯಾದಿ ಬುದ್ಧಿಯು ಹೇಗೆ ಕೂಡುವುದೋ ಹಾಗೆ' ಎಂದು ಹೇಳಲ್ಪಟ್ಟಿರುವುದರಿಂದ ನಾರಾಯಣಾದಿ ಶಬ್ದಗಳಿಗೆ ಶಿವಪರತ್ವವನ್ನು ಹೇಳುವುದು ತಮಗೆ ಸಮ್ಮತವಾದ ಪ್ರಮಾಣಕ್ಕೆ ವಿರುದ್ಧವಾಗಿದೆ. ಪುರುಷ ಸೂಕ್ತಸ್ಥ ಮಂತ್ರಗಳು, ಶ್ವೇತಾಶ್ವತರೋಪನಿಷತ್ತಿನಲ್ಲಿ ಕಂಡುಬರುತ್ತವಾದ ಕಾರಣ ಶ್ವೇತಾಶ್ವತರಾದ್ಯುಕ್ತ ಜಗತ್ಕಾರಣತ್ವಾದಿಗಳು ಕೂಡ ವಿಷ್ಣುವಿನಲ್ಲಿ

ಕೊಡುತ್ತವೆ, ಹೊರತು ಶಿವನಲ್ಲಿ ಕೊಡುವುದಿಲ್ಲವೆಂಬುದು ಮೊದಲಾದ ಬಾಧಕಗಳೂ ಶಿವಪರತ್ವ ವಿಷಯದಲ್ಲಿ ಮೇಲೆ ತೋರಿಸಲ್ಪಟ್ಟಿವೆ.

**ಪೂರ್ವಪಕ್ಷ:-** *ಪುರುಷಸೂಕ್ತದಲ್ಲಿರುವ ಮಂತ್ರಗಳು ಶ್ವೇತಾಶ್ವತರೋಪನಿಷತ್ತಿನಲ್ಲಿ ಕಂಡುಬರುವುದಾದುದರಿಂದ ಶ್ವೇತಾಶ್ವತರೋಪನಿಷತ್ತು ವಿಷ್ಣುಪರವೆಂದರೆ, ರುದ್ರದಲ್ಲಿರುವ ಮಂತ್ರಗಳು ಈ ಉಪನಿಷತ್ತಿನಲ್ಲಿ ಕಂಡುಬರುವುದರಿಂದ ಶಿವಪರವೇ ಎಂತಲೂ ಹೇಳಬಹುದು. ವಾಸ್ತವವಾಗಿ ಪುರುಷಸೂಕ್ತವು ವಿಷ್ಣುಪರವೆಂಬುದಕ್ಕೆ ಸಾಧಕವಿಲ್ಲ. ಪುರುಷಸೂಕ್ತದ ಎರಡನೆಯ ಮಂತ್ರದಲ್ಲಿ ಶಿವನಲ್ಲಿ ರೂಢವಾದ ಈಶಾನ ಶಬ್ದವಿರುವುದರಿಂದ ಶಿವಪರವೇ ಎಂದು ಹೇಳುವುದಕ್ಕೆ ಸಾಧಕವಿದೆ. ಐಶ್ವರ್ಯಗುಣಯೋಗದಿಂದ ಈಶಾನಶಬ್ದವು ವಿಷ್ಣುವಾಚಕವಾಗಬಹುದಾಗಿದ್ದರೂ, ಐಶ್ವರ್ಯಗುಣಯೋಗವು ಕೋಶಾದಿಸಿದ್ಧವಾದರೂಢಿಯು ಸಹ ಈಶಾನಶಬ್ದಕ್ಕೆ ಶಿವನಲ್ಲಿ ಇರುತ್ತವಾದಕಾರಣ ಈಶಾನಶಬ್ದವು ಶಿವವಾಚಕವೇ. ಬಾಧಕವಿಲ್ಲದೇ ಕೇವಲ ಯೋಗಲಭ್ಯಾರ್ಥವನ್ನು ಸ್ವೀಕರಿಸುವುದು ಸರಿಯಲ್ಲ. ಆದುದರಿಂದ ಪುರುಷಸೂಕ್ತವು ಶ್ವೇತಾಶ್ವತರೋಪನಿಷತ್ತು ಕೂಡ ಶಿವಪರವೇ.*

**ಸಮಾಧಾನ:-** ಈಶಾನಶಬ್ದವಿರುವುದರಿಂದ ಪುರುಷಸೂಕ್ತವು ಶಿವಪರವಾಗುವುದಾದರೆ, ಪ್ರಥಮಮಂತ್ರದಲ್ಲಿ ಪುರುಷ ಶಬ್ದವು, ಇಂದ್ರನಲ್ಲಿ ರೂಢವಾದ ಸಹಸ್ರಾಕ್ಷಶಬ್ದವು, ಸೂರ್ಯವಾಚಕವಾದ ಸಹಸ್ರಪಾಚ್ಛಬ್ದವೂ ಇರುವುದರಿಂದ, ಪುರುಷೇಂದ್ರಸೂರ್ಯಪರವಾಗಬೇಕಾಗುವುದು ಇದಲ್ಲದೇ, ದ್ವಿತೀಯಮಂತ್ರದಲ್ಲಿ ಪ್ರಯುಕ್ತವಾಗಿರುವ ಈಶಾನಶಬ್ದವು ಕೇವಲ ಯೌಗಿಕವೇ ಎಂದು ಹೇಳಬೇಕು. ಏಕೆಂದರೆ- ಎರಡನೇ ಮಂತ್ರದಲ್ಲಿ 'ಅಮೃತತ್ವಸ್ಯ' ಎಂದು ಷಷ್ಠ್ಯಂತಪದವು ಈಶಾನಶಬ್ದದ ಯೋಗಾರ್ಥವಾದ ಐಶ್ವರ್ಯಕ್ಕೆ ಪ್ರತಿಸಂಬಂಧಿಗೆ ಬೋಧಕವಾಗಿ ಪ್ರಯೋಗಿಸಲ್ಪಟ್ಟಿದೆಯಾದುದರಿಂದ ಇಂತಹ ಪ್ರತಿಸಂಬಂಧಿಬೋಧಕಪದವಿರುವ ಸ್ಥಳದಲ್ಲಿ ರೂಢ್ಯರ್ಥಕ್ಕೆ ಪ್ರತಿಭಾಸವಾಗುವುದೇ ಇಲ್ಲ. ಆದಕಾರಣ ಈಶಾನಶಬ್ದ ಬಲದಿಂದ ಪುರುಷಸೂಕ್ತಕ್ಕೆ ಶಿವಪರತ್ವವೂ ಸಿದ್ಧಿಸುವುದಿಲ್ಲ.

ಆದರೆ ಪುರುಷಸೂಕ್ತಕ್ಕೆ ವಿಷ್ಣುಪರತ್ವವೂ ಸಾಧಕವಿಲ್ಲವೆನ್ನಬಹುದು. ಅದು ಯುಕ್ತವಲ್ಲ. ಸೂಕ್ತದ ಆದಿಯಲ್ಲಿರುವ ಪುರುಷಶಬ್ದವು ನಾರಾಯಣಾದಿ ಶಬ್ದಗಳಂತೆ ವಿಷ್ಣುವಿಗೆ ಮುಖ್ಯವಾಗಿ ವಾಚಕವೆಂದು ಪ್ರಮಾಣಗಳಿರುವುದರಿಂದ, ಪುರುಷಶಬ್ದವನ್ನನುಸರಿಸಿ ಇಂದ್ರ-ಸೂರ್ಯಾದಿ ಬೋಧಕಪದಗಳೂ, ಯೋಗವೃತ್ತಿಯಿಂದ ವಿಷ್ಣುವನ್ನೇ ಬೋಧಿಸುತ್ತವೆ. ಲಕ್ಷ್ಮೀಪತಿತ್ವರೂಪವಾದ ವಿಷ್ಣುವಿನ ಅಸಾಧಾರಣ ಧರ್ಮವು ಪುರುಷಸೂಕ್ತದಲ್ಲಿ ಹೇಳಲ್ಪಟ್ಟಿದೆ. ಅಲ್ಲದೇ, ಪುರುಷಸೂಕ್ತವು ನಾರಾಯಣಾರಾಧನೆಯಲ್ಲಿಯೇ ವಿನಿಯುಕ್ತವಾಗಿದೆ. ಈ ಹೇತುಗಳಿಂದಲೂ ಇನ್ನೂ ಇತರ ಸಾಧಕಗಳಿಂದಲೂ ಪುರುಷಸೂಕ್ತವು ವಿಷ್ಣುಪರವೆಂದು ಸಿದ್ಧಿಸುತ್ತದೆ. ತನ್ಮಂತ್ರಗಳು ಶ್ವೇತಾಶ್ವತರೋಪನಿಷತ್ತಿನಲ್ಲಿ ಕಂಡುಬರುವುದರಿಂದ ಶ್ವೇತಾಶ್ವತರೋಪನಿಷತ್ತು ಕೂಡ ವಿಷ್ಣುಪರವೇ. ರುದ್ರಾಧ್ಯಾಯ ಮಂತ್ರಗಳು ಯಾವತ್ತೂ ಮುಖ್ಯವೃತ್ತಿಯಿಂದ ವಿಷ್ಣುಪರವಾಗಿ ಇರುತ್ತಾವಾದಕಾರಣ ರುದ್ರಮಂತ್ರಗಳು ಈ ಉಪನಿಷತ್ತಿನಲ್ಲಿ ಕಂಡುಬರುವುದು ಕೂಡ ಉಪನಿಷತ್ತು ವಿಷ್ಣುಪರವಾಗುವುದಕ್ಕೆ ಬಾಧಕವಲ್ಲ. ಈ ವಿಷಯದಲ್ಲಿ ಪೂರ್ವಮೀಮಾಂಸಾದಿ ನ್ಯಾಯಗಳನ್ನನುಸರಿಸಿ ಮಾಡತಕ್ಕ ಅಧಿಕವಿಚಾರವನ್ನು ಪರತತ್ತ್ವಪ್ರಕಾಶಿಕಾದಿ ಗ್ರಂಥಗಳಿಂದ ತಿಳಿಯತಕ್ಕದು.

**ಪೂರ್ವಪಕ್ಷ:-** *ಅಥರ್ವಶಿರಸ್ಸೆಂಬ ಸಾಮವೇದದ ಉಪನಿಷತ್ತಿನಲ್ಲಿ 'ನಾನೊಬ್ಬನೇ ಪ್ರಥಮದಲ್ಲಿ ಇದ್ದೆನು; (ಈಗಲೂ) ಇದ್ದೇನೆ; (ಮುಂದೆ) ಕೂಡ ಇರುವೆನು. ಅನ್ಯನು ನನ್ನಿಂದ ವ್ಯತಿರಿಕ್ತನು ಯಾರೂ ಇರಲಿಲ್ಲ' ಎಂದು ಶಿವವಚನವಿದೆ. ಇದು ಆದಿಕಾಲದಲ್ಲಿ ಶಿವಭಿನ್ನರ ಇರುವಿಕೆಯನ್ನು ನಿಷೇಧಿಸಿ, ಶಿವನ ಇರುವಿಕೆಯನ್ನು ವಿಧಿಸುತ್ತಾದಕಾರಣ ಶಿವನೇ ಜಗತ್ಕಾರಣನೆಂಬುದಕ್ಕೆ ಸಾಧಕಪ್ರಮಾಣವಾಗಿರುವುದು.*

**ಸಮಾಧಾನ:-** ಈ ವಾಕ್ಯವು ಶಿವನಿಗೆ ಸಕಲ ಜಗತ್ಕಾರಣತ್ವವಿಷಯದಲ್ಲಿ ಪ್ರಮಾಣವಾಗುವುದಿಲ್ಲ. ಏಕೆಂದರೆ-ಈ ವಾಕ್ಯದಲ್ಲಿ 'ನಾನು' ಎಂದು ಇದೆ ಹೊರತು 'ರುದ್ರನು ಇದ್ದನು' ಎಂದು ರುದ್ರವಾಚಕಪದವಿಲ್ಲ. ಆದರೆ ಇದಕ್ಕಿಂತಲೂ ಪೂರ್ವದಲ್ಲಿ 'ದೇವತೆಗಳು ಸ್ವರ್ಗಲೋಕವನ್ನು ಕುರಿತು ಹೋದರು. ಅವರು ರುದ್ರನನ್ನು ನೀನು ಯಾರು? ಎಂದು ಪ್ರಶ್ನೆಮಾಡಿದರು. ಅವನು ಹೇಳಿದನು ಎಂಬವರೆವಿಗೂ ಇರುವ ವಾಕ್ಯದಲ್ಲಿ ರುದ್ರಪದವಿದೆಯಾದುದರಿಂದ ಈ ವಾಕ್ಯದಲ್ಲಿ ತ್ರಿಕಾಲವರ್ತಿಯಾಗಿ ಹೇಳಲ್ಪಟ್ಟವನು ಶಿವನೇ ಎಂದು ಹೇಳಬಹುದು. ಪೂರ್ವವಾಕ್ಯದಲ್ಲಿ ರುದ್ರಪದವಿರುವುದು ಸತ್ಯವೇ. ಆದರೂ ಅಷ್ಟುಮಾತ್ರದಿಂದ ಈ ವಾಕ್ಯವು ರುದ್ರನಿಗೆ ಕಾಲತ್ರಯದಲ್ಲಿ ಇರುವಿಕೆಯನ್ನು ವಿಧಿಸುತ್ತದೆ ಎಂಬುದಕ್ಕೆ ಅನುಕೂಲವಿಲ್ಲ. ಪ್ರಕರಣಪರ್ಯಾಲೋಚನೆಯನ್ನು ಮಾಡಲಾಗಿ ಈ ವಾಕ್ಯವು ವೇದದ ಸ್ವತಂತ್ರವಾಕ್ಯವಲ್ಲ; ರುದ್ರವಾಕ್ಯದ ಅನುವಾದವೇ

ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೇ, 'ದೇವತೆಗಳು ಸ್ವರ್ಗವನ್ನು ಕುರಿತು ಹೋದರು' ಎಂದು ಪ್ರತಿಪಾದಿಸುವ ವಾಕ್ಯದಲ್ಲಿ 'ಹವೈ' ಎಂಬ ಅನುವಾದತ್ವಬೋಧಕ ಶಬ್ದವಿರುತ್ತದೆ. ಆದುದರಿಂದ ದೇವತೆಗಳು ಸ್ವರ್ಗಲೋಕಕ್ಕೆ ಹೋಗಿ ರುದ್ರನನ್ನು ಪ್ರಶ್ನೆಮಾಡಿದುದಕ್ಕೆ ರುದ್ರನು ಹೇಳಿದನೆಂಬ ಅಂಶದಲ್ಲಿ ಕೂಡ ಈ ವಾಕ್ಯವು ಅನುವಾದವೆಂದು ಹೇಳಬೇಕಾಗಿದೆ. ಆದುದರಿಂದ ಪೂರ್ವವಾಕ್ಯದಲ್ಲಿರುವ ರುದ್ರಪದದ ಬಲದಿಂದಲೂ ಈ ವಾಕ್ಯದಲ್ಲಿ ತೋರುವ ಕಾಲತ್ರಯವರ್ತಿತ್ವವು ಶಿವನಲ್ಲಿ ಸಿದ್ಧಿಸುವುದಿಲ್ಲ. ಆದಕಾರಣ ಈ ಅನುವಾದಕ್ಕೆ ಪುರೋವಾದವಾಗಿರುವ ಮಹೋಪನಿಷತ್ತು ಮೊದಲಾದವುಗಳ ಅನುಸಾರವಾಗಿ ಈ ವಾಕ್ಯದಲ್ಲಿ ಕಾಲತ್ರಯದಲ್ಲಿ ಇದ್ದವನಾಗಿ ಹೇಳಲ್ಪಟ್ಟವನು ನಾರಾಯಣನೇ, ಇಲ್ಲದಿದ್ದವರು ಬ್ರಹ್ಮರುದ್ರಾದಿಗಳೇ ಎಂತಲೂ ಹೇಳಬೇಕು.

ಈ ವಾಕ್ಯದ ಸ್ಥಿತಿಯನ್ನು ಚೆನ್ನಾಗಿ ವಿಚಾರಮಾಡಿದರೆ ದೇವತೆಗಳ ಪ್ರಶ್ನೆಯು ರುದ್ರನ ಉತ್ತರವು ಕೂಡ ರುದ್ರವಿಷಯಕವಲ್ಲ, ರುದ್ರಾಂತರ್ಯಾಮಿವಿಷಯಕವೇ ಎಂದು ಸಿದ್ಧಿಸುತ್ತದೆ. ದೇವತೆಗಳು ಸ್ವರ್ಗವಾಸಿಗಳಾಗಿರಲಾಗಿ, ಅವರು ಸ್ವರ್ಗಕ್ಕೆ ಹೋದರೆಂಬ ವಾಕ್ಯಕ್ಕೆ ಕೈಲಾಸಕ್ಕೆ ಹೋದರೆಂದೇ ಅರ್ಥ ಹೇಳಬೇಕು. ಕೈಲಾಸಕ್ಕೆ ಪ್ರಯತ್ನಪೂರ್ವಕವಾಗಿ ಹೋದ ದೇವತೆಗಳಿಗೆ ರುದ್ರನ ದೆಸೆಯಿಂದ ಪರತತ್ತ್ವವನ್ನು ತಿಳಿದುಕೊಳ್ಳಬೇಕೆಂಬುದೇ ಉದ್ದೇಶ್ಯವು ಹೊರತು, ರುದ್ರನ ಸ್ವರೂಪವನ್ನು ಮಾತ್ರ ತಿಳಿದುಕೊಳ್ಳುವುದಲ್ಲ. ಕೈಲಾಸದಲ್ಲಿರುವವರು ರುದ್ರನೆಂದು ತಿಳಿಯದಿದ್ದಪಕ್ಷದಲ್ಲಿ ಅಲ್ಲಿಗೆ ಹೋಗುವುದಕ್ಕೆ ಕಾರಣವಿರುವುದಿಲ್ಲ. ಆದಕಾರಣ 'ನೀನು ಯಾರು?' ಎಂಬ ದೇವತೆಗಳ ಪ್ರಶ್ನವಾಕ್ಯಕ್ಕೆ 'ದೇವತೆಗಳಲ್ಲಿ ಮುಖ್ಯನಾಗಿರುವ ನಿನಗೂ ಅಂತರ್ಯಾಮಿಯಾಗಿದ್ದು ಜಗತ್ತಿಗೆ ಸೃಷ್ಟ್ಯಾದಿಗಳನ್ನು ಮಾಡುವವನು ಯಾರು?' ಎಂದೇ ಅಭಿಪ್ರಾಯವನ್ನು ಹೇಳಬೇಕು. ಅದಕ್ಕೆ ಉತ್ತರವನ್ನು ಹೇಳುವಾಗ, ರುದ್ರನು ದೇವತೆಗಳು ನನ್ನನ್ನು ಕುರಿತು ಅಂತರ್ಯಾಮಿಯ ವಿಷಯದಲ್ಲಿ ಪ್ರಶ್ನೆಮಾಡಿದ್ದಾರೆ ಎಂದು ತಿಳಿದನಾದ ಕಾರಣ ಅಂತರ್ಯಾಮಿ ಧರ್ಮವಾದ ತ್ರಿಕಾಲವರ್ತಿತ್ವವನ್ನು ಪ್ರತಿಪಾದಿಸಿ, ಅನ್ಯನಾದ ನನಗಿಂತಲೂ ವ್ಯತಿರಿಕ್ತನು ಇರಲಿಲ್ಲವೆಂದು ಹೇಳಿದನು. 'ಅನ್ಯನಿರಲಿಲ್ಲ' ಎಂದು ಹೇಳಿದರೆ ಸಾಕಾಗಿರುವಲ್ಲಿ 'ನನ್ನಿಂದ ವ್ಯತಿರಿಕ್ತನಾದ ಅನ್ಯನು ಇರಲಿಲ್ಲ' ಎಂದು ಹೇಳುವುದರಿಂದ ನನಗಿಂತಲೂ ವ್ಯತಿರಿಕ್ತನು ಅಂದರೆ ''ಅತಿರಿಕ್ತಸ್ಸಮಧಿಕಃ'' ಎಂಬ ಕೋಶಾನುಸಾರದಿಂದ ಅಧಿಕನಾದ ನನ್ನ ಅಂತರ್ಯಾಮಿಯನ್ನು ಬಿಟ್ಟು ಮತ್ತು ಯಾರೂ ಇಲ್ಲವೆಂದು ಸರ್ವಾಂತರ್ಯಾಮ್ಯೈಕ್ಯವನ್ನು ಪ್ರತಿಪಾದಿಸಿದನೆಂದು ಹೇಳಬೇಕು. ಈ ಅರ್ಥವನ್ನು ಒಪ್ಪದೇ ಹೋದರೆ, 'ಅವನು ಅಂತರದಕ್ಕಿಂತಲೂ ಅಂತರವನ್ನು ಪ್ರವೇಶಿಸಿದನು. ದಿಕ್ಕುಗಳ ಅಂತರವನ್ನು ಪ್ರವೇಶಿಸಿದನು' ಎಂದು ಉತ್ತರವಾಕ್ಯದಲ್ಲಿ ಅಂತರ್ಯಾಮಿ ಪ್ರತಿಪಾದನವು ಹೊಂದುವುದಿಲ್ಲ. ಆ ವಾಕ್ಯದಲ್ಲಿರುವ ತಚ್ಛಬ್ದವು ರುದ್ರಪರವೇ ಆದುದರಿಂದ ರುದ್ರನಿಗೆ ಸರ್ವಾಂತರ್ಯಾಮಿತ್ವವು ಈ ವಾಕ್ಯದಲ್ಲಿ ಪ್ರತಿಪಾದಿಸಲ್ಪಡುವುದು ಎಂದನ್ನಕೂಡದು. ಅದು ರುದ್ರಪರವಾಗುವ ಪಕ್ಷದಲ್ಲಿ ಪೂರ್ವವಾಕ್ಯದಲ್ಲಿ ಹೇಳಿರುವ ರೀತಿಯಿಂದ 'ನಾನು ಪ್ರವೇಶಿಸಿದೆನು' ಎಂದು ಅಹಂ ಶಬ್ದಘಟಿತವಾಗಿ ವಾಕ್ಯವಿರಬೇಕೇ ಹೊರತು, 'ಅವನು ಪ್ರವೇಶಿಸಿದನು' ಎಂದು ತಚ್ಛಬ್ದಘಟಿತವಾಕ್ಯವಿರಬಾರದಾಗಿತ್ತು. ತಚ್ಛಬ್ದಯುಕ್ತವಾಗಿ ವಾಕ್ಯವಿರುವುದರಿಂದ ಪೂರ್ವದಲ್ಲಿ ಅಹಂ ಶಬ್ದಕ್ಕೂ ಅಂತರ್ಯಾಮಿಪರತ್ವವನ್ನು ಹೇಳಬೇಕು. ಇನ್ನು 'ಅವನು ಅಂತರಕ್ಕಿಂತಲೂ ಅಂತರವನ್ನು ಪ್ರವೇಶಿಸದನು' ಎಂಬ ವಾಕ್ಯವು ರುದ್ರವಾಕ್ಯವಲ್ಲ; ಶ್ರುತಿವಾಕ್ಯವೇ ಎಂದು ಹೇಳಬೇಕು. ಅದೂ ಸರಿಯಲ್ಲ. ಹಾಗಾಗುವ ಪಕ್ಷದಲ್ಲಿ ಈ ವಾಕ್ಯಕ್ಕೂ ಮುಂದಿರುವ ಅಹಂ ಶಬ್ದಯುಕ್ತವಾಕ್ಯಗಳಿಗೂ ಮಧ್ಯದಲ್ಲಿ 'ರುದ್ರನು ಮಾತನಾಡಿದನು' ಎಂಬ ಅರ್ಥವುಳ್ಳ ಒಂದು ವಾಕ್ಯವಿರಬೇಕಾಗಿತ್ತು. ಅಂತಹ ವಾಕ್ಯವಿಲ್ಲವಾದ ಕಾರಣ 'ನಾನೊಬ್ಬನೇ ಆದಿಯಲ್ಲಿದ್ದೆನು' ಎಂಬುದು ಮೊದಲುಮಾಡಿ ಮುಂದೆ ಅಹಂ ಶಬ್ದಯುಕ್ತವಾಕ್ಯಗಳೆಲ್ಲಾ ರುದ್ರವಾಕ್ಯವೇ ಎಂದು ಹೇಳಬೇಕು. ರುದ್ರವಾಕ್ಯಗಳ ಮಧ್ಯದಲ್ಲಿ 'ಅವನು ಅಂತರಕ್ಕಿಂತಲೂ ಅಂತರವನ್ನು ಪ್ರವೇಶಿಸಿದನು' ಎಂದು ವಾಕ್ಯವಿರುವುದರಿಂದ ಪೂರ್ವೋತ್ತರವಾಕ್ಯಗಳೆಲ್ಲಾ ರುದ್ರಾಂತರ್ಯಾಮಿ ಪರವೇ ಎಂದು ಅಂಗೀಕರಿಸಬೇಕು. 'ನನ್ನಿಂದ ವ್ಯತಿರಿಕ್ತನಾದ ಅನ್ಯನು ಯಾರು ಇರಲಿಲ್ಲ' ಎಂಬ ವಾಕ್ಯವಾದಮೇಲೆ ರುದ್ರವಚನ ಸಮಾಪ್ತಿಯನ್ನು ತಿಳಿಸುವ ಇತಿ ಶಬ್ದವಿರುವುದರಿಂದ, ಅದರ ಅನಂತರದಲ್ಲಿರುವ 'ಅವನು ಅಂತರಕ್ಕಿಂತಲೂ ಅಂತರವನ್ನು ಪ್ರವೇಶಿಸಿದನು' ಎಂಬ ವಾಕ್ಯವು ಶ್ರುತಿವಾಕ್ಯವೇ, ಹೊರತು ರುದ್ರವಾಕ್ಯವಲ್ಲವೆಂದು ಹೇಳುವುದು ಕೂಡ ಯುಕ್ತವಲ್ಲ. ಮುಂದೆ ಮತ್ತು ರುದ್ರವಚನಾರಂಭ ಬೋಧಕವಾಕ್ಯವಿಲ್ಲದೇ ಇರುವ ಕಾರಣದಿಂದ ಈ ಇತಿಶಬ್ದವು ರುದ್ರವಚನ ಸಮಾಪ್ತಿಯನ್ನು ತಿಳಿಸುವುದಿಲ್ಲ. 'ನನ್ನ ಅಂತರ್ಯಾಮಿಯು ಕಾಲತ್ರಯದಲ್ಲಿಯು ಇರುವವನಾದ ಕಾರಣ ಅವನು ನಿತ್ಯಾನಿತ್ಯಾದಿ ಕಾಲತ್ರಯ ಸಂಬಂಧಿಗಳಾದ ಸಕಲ ಪದಾರ್ಥಗಳಲ್ಲಿಯೂ ಪ್ರವೇಶಮಾಡಿದನು' ಎಂದು ಮುಂದೆ ಹೇಳಲ್ಪಡುವ ಸರ್ವಾಂತರ್ಯಾಮಿತ್ವಕ್ಕೆ

ಪೂರ್ವವಾಕ್ಯದಲ್ಲಿ ಉಕ್ತವಾದ ಕಾಲತ್ರಯವರ್ತಿತ್ವವನ್ನು ಹೇತುವನ್ನಾಗಿ ತಿಳಿಯುವುದಕ್ಕಾಗಿ ಹೇತ್ವರ್ಥಕವಾದುದೇ ಇತಿ ಶಬ್ದವೆಂದು ಹೇಳುವು-ದರಲ್ಲಿ ಯಾವ ವಿರೋಧವೂ ಇಲ್ಲವಾದಕಾರಣದಿಂದಲೂ, ಈ ಪ್ರಕರಣದಲ್ಲಿ ಮಹೋಪನಿಷದಾದಿಗಳಲ್ಲಿ ಹೇಳಿರುವಂತೆ ಕಾರಣತ್ವವೂ ಉಕ್ತವಾಗದೇ ಇರುವುದರಿಂದಲೂ, ಈ ಅಥರ್ವಶಿರಸ್ಸಿನ ವಾಕ್ಯದಿಂದ ಶಿವನಿಗೇ ಸಕಲಜಗತ್ಕಾರಣತ್ವವು ಸಿದ್ಧಿಯಾಗಿ ಸರ್ವೋತ್ತಮತ್ವವು ಸಿದ್ಧಿಯಾಗುವುದಿಲ್ಲ. ವಿಷ್ಣುಜಗತ್ಕಾರಣತ್ವವು ಸ್ಪಷ್ಟವಾದ ನಾರಾಯಣೋಪನಿಷದಾದಿಗಳಿಂದ ಸಿದ್ಧವಾಗುವುದರಿಂದ ವಿಷ್ಣುವಿಗೆ ಸರ್ವೋತ್ತಮತ್ವಕ್ಕೆ ಬಾಧಕವೂ ಇರುವುದಿಲ್ಲ.

***ಪೂರ್ವಪಕ್ಷ:-*** *ಅಥರ್ವಶಿಖೋಪನಿಷತ್ತು ಅತಿಸ್ಪಷ್ಟವಾಗಿ ಶಿವನಿಗೆ ಜಗತ್ಕಾರಣತ್ವವನ್ನು ನಿರೂಪಿಸುತ್ತದೆ. ಅದರ ಆರಂಭದಲ್ಲಿ ಪಿಪ್ಪಲಾದರ ಮಕ್ಕಳಾದ ಅಂಗಿರಸರೆಂಬುವರು ಮತ್ತು ಸನತ್ಕುಮಾರರು ಅಥರ್ವಣರನ್ನು ಕುರಿತು ಮಂತ್ರ-ಧ್ಯಾನ-ಧ್ಯಾತೃ-ಧ್ಯೇಯಗಳು ಯಾವುವೆಂದು ಪ್ರಶ್ನೆ ಮಾಡಲಾಗಿ, ಮಂತ್ರ-ಧ್ಯಾನ-ಧ್ಯಾತೃಗಳೆಂಬ ಮೂರುವಿಷಯದಲ್ಲಿ ಉತ್ತರವನ್ನು ಹೇಳಿ, ಧ್ಯೇಯನು ಯಾರು ಎಂಬ ನಾಲ್ಕನೆಯ ಪ್ರಶ್ನೆಗೆ, 'ಪ್ರಾಣವನ್ನು ಕರಣಗಳೊಡನೆ ಮನಸ್ಸಿನಲ್ಲಿ, ನಾದಾಂತದಲ್ಲಿ ಪರಮಾತ್ಮನಲ್ಲಿ ಪ್ರತಿಷ್ಠಾಪಿಸಿ ಧ್ಯಾನಾರ್ಹನಾದ ಈಶಾನನನ್ನು ಧ್ಯಾನಿಸಬೇಕು. ಈ ಸರ್ವವೂ ಬ್ರಹ್ಮವಿಷ್ಣುರುದ್ರೇಂದ್ರರೆ. ಅವರೆಲ್ಲರೂ ಸಕಲೇಂದ್ರಿಯಗಳು ಭೂತಗಳು ಸಹ ಹುಟ್ಟುವುವು. ಧ್ಯಾತೃವಾದ ಧಾತನು ಕಾರಣನಲ್ಲ. ಕಾರಣನಾದರೋ ಧ್ಯೇಯನು, ಸರ್ವೈಶ್ವರ್ಯಸಂಪನ್ನನು, ಸರ್ವೇಶ್ವರನು ಆಕಾಶಮಧ್ಯದಲ್ಲಿರುವವನೂ ಆದ ಶಂಭುವು' ಎಂದು ಅಥರ್ವಣ ರಿಂದ ಉತ್ತರವು ಕೊಡಲ್ಪಟ್ಟಿದೆ. ಇದರಲ್ಲಿ ಈಶಾನನೇ ಧ್ಯೇಯನೆಂದು ನಿರ್ಧಾರಣಮಾಡಿ, ಇತರ ದೇವತೆಗಳಿರಲಾಗಿ ಈಶಾನನಿಗೆ ಧ್ಯೇಯತ್ವವು ಹೇಗೆ ಕೂಡುತ್ತದೆಯೆಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ 'ಈ ಸರ್ವವೂ ವಿಷ್ಣುಬ್ರಹ್ಮರುದ್ರೇಂದ್ರರೇ' ಎಂದು ಬ್ರಹ್ಮವಿಷ್ಣುರುದ್ರೇಂದ್ರರಿಗೆ ಇತರ ದೇವತೆಗಳಿಗಿಂತಲೂ ಪ್ರಾಮುಖ್ಯತೆಯನ್ನು ಹೇಳಿ, 'ಅವರೂ, ಭೂತೇಂದ್ರಿಯಗಳು ಸಹ ಹುಟ್ಟುವರು' ಎಂದು ಅವರಿಗೆ ಭೂತೇಂದ್ರಿಯಾದಿ ತುಲ್ಯವಾಗಿ ಪರಮೇಶ್ವರನ ದೆಸೆಯಿಂದ ಉತ್ಪತ್ತಿಯನ್ನು ಹೇಳಿ, ಅವರಲ್ಲಿ ಸೃಷ್ಟಿಕರ್ತನೆಂದು ಪ್ರಸಿದ್ಧನಾದ ಬ್ರಹ್ಮನಿಗೆ ಕಾರಣತ್ವದ ನಿಷೇಧಮುಖದಿಂದ ಸರ್ವರಿಗೂ ಕಾರಣತ್ವವನ್ನು ನಿಷೇಧಿಸಿ, ಅವರೆಲ್ಲರಿಗೂ ಶಿವನು ಕಾರಣನು, ಸರ್ವೇಶ್ವರನು, ಆದುದರಿಂದ ಧ್ಯೇಯನು. ಎಂದು ಉಪಸಂಹರಿಸಲ್ಪಟ್ಟಿದೆ. ಈ ಪ್ರಕಾರವಾಗಿ ಸೋಪಪತ್ತಿಕವಾಗಿ ಶಿವಕಾರಣತ್ವವು ಸರ್ವೇಶ್ವರತ್ವವೂ ಸ್ಪಷ್ಟವಾಗಿ ನಿರೂಪಿತವಾಗಿರುವುದರಿಂದ ಕಾರ್ಯಕೋಟಿಯಲ್ಲಿ ಸೇರಿದ ನಾರಾಯಣನಿಗೆ ಸರ್ವಕಾರಣತ್ವವು ಹೇಗೆ ಕೂಡಬಹುದು. ಆದುದರಿಂದ ನಾರಾಯಣನಿಗೆ ಸರ್ವೋತ್ತಮತ್ವ ಸಿದ್ಧಿಯ ಆಶೆಯೇ ಬಹುದೂರವಾಗುವುದು.*

**ಸಮಾಧಾನ:-** ಮೇಲೆ ಉದಾಹೃತವಾದ ಅಥರ್ವಶಿಖಾವಚನದ ಸಂದರ್ಭವನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿದರೆ ಶಿವನಿಗೆ ಕಾರಣತ್ವವು ಅದರಿಂದ ಸಿದ್ಧಿಸುವುದಿಲ್ಲ. ಈ ಅಥರ್ವಶಿಖೆಯಲ್ಲಿ ಚತುರ್ಥಪ್ರಶ್ನೆಗೆ ಉತ್ತರವನ್ನು ಆರಂಭಿಸಿದಕೂಡಲೇ,'ಧ್ಯಾನಕ್ಕೆ ಅರ್ಹನಾದ ಈಶಾನನ್ನು ಧ್ಯಾನಿಸಬೇಕು' ಎಂದು ಧ್ಯಾನವಿಧಿಯು ಕಂಡು ಬರುತ್ತದೆ. ಆ ವಿಧಿಗೆ ಬೇಕಾಗಿರುವ ಪ್ರಾಶಸ್ತ್ಯವನ್ನು ತಿಳಿಯಪಡಿಸುವುದಕ್ಕಾಗಿ ಒಂದು ವಿಧವಾದ ಅರ್ಥವಾದ ವಾಕ್ಯವು ಅವಶ್ಯಕವಾದುದರಿಂದ, ಬ್ರಹ್ಮವಿಷ್ಣುರುದ್ರೇಂದ್ರರಿಗೆ ಜನ್ಯತ್ವವನ್ನು , ಶಿವನಿಗೆ ತಜ್ಜನಕತ್ವವನ್ನು ರೂಪಿಸುವ ವಾಕ್ಯವು ಅರ್ಥವಾದರೂಪವಾಗಿ ಪ್ರವೃತ್ತವಾಗಿದೆಯೆಂದು ಹೇಳಬೇಕು. 'ಈ ಸರ್ವವೂ ಬ್ರಹ್ಮವಿಷ್ಣುರುದ್ರೇಂದ್ರರು. ಅವರು ಹುಟ್ಟುವರು.' ಎಂಬ ವಾಕ್ಯವು ಅಲ್ಲಿ ಹೇಳಿರುವ ರುದ್ರನ ದೆಸೆಯಿಂದ ರುದ್ರನ ಉತ್ಪತ್ತಿಯು ವಿರುದ್ಧವಾದುದರಿಂದ ರುದ್ರೋತ್ಪತ್ತ್ಯಂತದಲ್ಲಿ ವಿರುದ್ಧಾರ್ಥ ಪ್ರತಿಪಾದಕವಾದ ಗುಣವಾದವೆಂಬ ಅರ್ಥವಾದವಾಗಿರುತ್ತದೆ. ಹೀಗೆಯೇ 'ನಾರಾಯಣನ ದೆಸೆಯಿಂದ ಬ್ರಹ್ಮರುದ್ರೇಂದ್ರಾದಿಗಳು ಸರ್ವರೂ ಹುಟ್ಟುತ್ತಾರೆ' ಎಂತಲೂ, ಸೃಷ್ಟ್ಯಾದಿಯಲ್ಲಿ 'ನಾರಾಯಣನೊಬ್ಬನೇ ಇದ್ದನು. ಬ್ರಹ್ಮನಿರಲಿಲ್ಲ, ರುದ್ರನಿರಲಿಲ್ಲ. ' ಎಂತಲೂ ಹೇಳುವ ಮಹೋಪನಿಷದಾದಿ ವಾಕ್ಯಗಳಿಂದ ನಾರಾಯಣನ ದೆಸೆಯಿಂದ ಹುಟ್ಟಿದವರಾಗಿ ತಿಳಿಸಲ್ಪಟ್ಟಿರುವ ಬ್ರಹ್ಮೇಂದ್ರರನ್ನು ಕುರಿತು, ಮತ್ತು ಸರ್ವಜಗತ್ಕಾರಣನೆಂದು ಅದೇ ಉಪನಿಷತ್ತುಗಳಿಂದ ಬೋಧಿತನಾದ ನಾರಾಯಣಶಬ್ದವಾಚ್ಯನಾದ ವಿಷ್ಣುವನ್ನು ಕುರಿತು ಕೂಡ ಶಿವನಿಗೆ ಜನಕತ್ವವು ಮೇಲೆ ಹೇಳಿದ ಉಪನಿಷತ್ಪ್ರಮಾಣಗಳಿಗೆ ವಿರುದ್ಧವಾಗಿರುವುದರಿಂದ ವಿಷ್ಣುಬ್ರಹ್ಮೇಂದ್ರರ ಉತ್ಪತ್ತಿ ವಿಷಯದಲ್ಲಿಯು ಗುಣವಾದವೆಂದೇ ಹೇಳಬೇಕಾಗಿದೆ. ಆದುದರಿಂದ ಈ ವಾಕ್ಯವು ಶಿವಜಗತ್ಕಾರಣವಿಷಯದಲ್ಲಿ ಪ್ರಮಾಣವಲ್ಲ.

ಈ ಶ್ರುತಿಯು ಇಲ್ಲದಿರುವ ಅರ್ಥವನ್ನು ಪ್ರತಿಪಾದಿಸುವುದಾದರೆ, ವೇದಪ್ರಾಮಾಣ್ಯವೇ ಹೋಗಬೇಕಾಗುತ್ತೆಯೆಂದಾಕ್ಷೇಪಿಸಕೂಡದು.

ಏಕೆಂದರೆ- ಒಂದು ವಿಧಿಯನ್ನು ಹೇಳಿ, ವಿಧ್ಯನುಸಾರಮಾಡುವ ಕಾರ್ಯಗಳಲ್ಲಿ ವಿನಿಯುಕ್ತವಾದ ಮಂತ್ರಗಳಲ್ಲಿ ಕೂಡ ವಿಶೇಷ್ಯದಲ್ಲಿ ಇಲ್ಲದ ವಿಶೇಷಣಗಳನ್ನು ಹೇಳುವುದುಂಟು. ಹಾಗೆ ಹೇಳುವಿಕೆಯು ಅಭ್ಯುದಯಕಾರಿಯಾದುದರಿಂದ ನಿಯಮಾದೃಷ್ಟಕ್ಕೆ ಉಪಯುಕ್ತವಾಗುತ್ತದೆಂದು ನವಮಾಧ್ಯಾಯದಲ್ಲಿ ಮೀಮಾಂಸಕರು ಹೇಳಿ ವಿಧಿವಾಕ್ಯದ ಪ್ರಾಮಾಣ್ಯವಲ್ಲದೇ ಬೇರೆ ಪ್ರಾಮಾಣ್ಯವು ಮಂತ್ರಕ್ಕೂ ಅರ್ಥವಾದಕ್ಕೂ ಅಪೇಕ್ಷಿತ ವಲ್ಲವೆಂದು ನಿರೂಪಿಸಿರುವರು. ಆದುದರಿಂದ ಅರ್ಥವಾದದಲ್ಲಿ ಉಕ್ತಾರ್ಥವು ವಿರುದ್ಧವಾಗಿದ್ದರೆ ಅದು ಗುಣವಾದವೆಂಬ ಹೆಸರನ್ನು ಪಡೆದು, ತನ್ನ ಅರ್ಥವನ್ನು ಸ್ಥಾಪಿಸಿಕೊಡದೇ ಹೋದರೂ, ವಿಧಿಗೆ ಅನುಕೂಲವಾಗಿರುವುದರಿಂದ ಪ್ರಮಾಣವೇ ಆಗುತ್ತದೆ.

ಅಲ್ಲದೇ, ಈ ವಾಕ್ಯದಲ್ಲಿ ಬ್ರಹ್ಮರುದ್ರೇಂದ್ರರು ಹುಟ್ಟುತ್ತಾರೆಯೆಂದು ಉಕ್ತವಾಗಿದೆಯೇ ಹೊರತು, ಶಿವನದೆಸೆಯಿಂದ ಹುಟ್ಟುತ್ತಾರೆಯೆಂದು ಇಲ್ಲ. ಆದುದರಿಂದಲೂ ಶಿವನಿಗೆ ನಾರಾಯಣಜನಕತ್ವವು ಸಿದ್ಧಿಸುವುದಿಲ್ಲ. ಆದರೆ ಸನ್ನಿಹಿತ ವಾಕ್ಯಾಂತರದಲ್ಲಿರುವ ಪದದಿಂದ ಬೋಧಿತ-ನಾದುದರಿಂದ ಶಿವನೇ ಬ್ರಹ್ಮಾದಿ ಜನಕನೆಂದು ಸಿದ್ಧಿಸುತ್ತದೆಯೆಂದು ಹೇಳಬಹುದು. ಅದೂ ಸರಿಯಲ್ಲ. ಸನ್ನಿಹಿತವಾಕ್ಯಾಂತರ ಬಲದಿಂದ ಅರ್ಥಸಿದ್ಧಿಯಾಗುತ್ತದೆಂದರೆ, ಸನ್ನಿಧ್ಯಾಕಾಂಕ್ಷಾರೂಪವಾದ ಪ್ರಕರಣವು ಪ್ರಕೃತ ಶಿವಜಗತ್ಕಾರಣತ್ವ ವಿಷಯದಲ್ಲಿ ಪ್ರಮಾಣವೆಂದು ಹೇಳಿದಂತಾಯಿತು. ಆದರೆ ಪ್ರಮಾಣಗಳಿಗೆ ಬಲಾಬಲಗಳನ್ನು ವಿಚಾರಿಸುವಾಗ ಮೀಮಾಂಸಾ ಶಾಸ್ತ್ರದಲ್ಲಿ 'ಶ್ರುತಿ-ಲಿಂಗ-ವಾಕ್ಯ-ಪ್ರಕರಣ-ಸ್ಥಾನ-ಸಮಾಖ್ಯಾಗಳು ಒಂದುಕಡೆಯಲ್ಲಿ ಸೇರಿದರೆ ಅವುಗಳಿಗೆ ವಿರೋಧ ಬಂದಾಗ ಮೊದಲುಮೊದಲು ಹೇಳಿದುದು ಪ್ರಬಲವು, ಅಂದರೆ ಸಮಾಖ್ಯೆಗಿಂತಲೂ ಸ್ಥಾನವು, ಸ್ಥಾನಕ್ಕಿಂತಲೂ ಪ್ರಕರಣವು, ಪ್ರಕರಣಕ್ಕಿಂತಲೂ ವಾಕ್ಯವು, ವಾಕ್ಯಕ್ಕಿಂತಲೂ ಲಿಂಗವು, ಲಿಂಗಕ್ಕಿಂತಲೂ ಶ್ರುತಿಯು ಪ್ರಬಲ ಎಂದು ತಿಳಿಯುವುದು' ಎಂದು ಹೇಳಲ್ಪಟ್ಟಿದೆ. ಆದುದರಿಂದ ಶಿವಪದಘಟಿತವಾದ ವಾಕ್ಯದ ಸನ್ನಿಧಾನರೂಪವಾದ ಪ್ರಕರಣಕ್ಕಿಂತಲೂ, ಅರ್ಥಾಂತರವನ್ನು ಹೊಂದಿಸಲು ಅಸಾಧ್ಯವಾದ ನಾರಾಯಣೋಪನಿಷದಾದಿಗತವಾದ ನಾರಾಯಣನಿಗೆ ಜಗತ್ಕಾರಣತ್ವವನ್ನು ಪ್ರತಿಪಾದಿಸುವ ವಾಕ್ಯವು ಪ್ರಬಲವಾದ ನಿಮಿತ್ತದಿಂದ, ಈ ಅಥರ್ವಶಿಖೆಯ ವಾಕ್ಯದಲ್ಲಿ ಉಕ್ತವಾದ ಬ್ರಹ್ಮಾದಿ ಜನಕತ್ವವನ್ನು ಕೂಡ ನಾರಾಯಣನಿಗೆ ಹೇಳಬೇಕು, ಹೊರತು ಶಿವನಿಗೆ ಹೇಳಲಾಗುವುದಿಲ್ಲ.

ಮತ್ತು ಧ್ಯೇಯ ವಿಷಯಕವಾದ ನಾಲ್ಕನೆಯ ಪ್ರಶ್ನೆಗೆ ಉತ್ತರಾರಂಭದಲ್ಲಿ ಈಶಾನನನ್ನು ಧ್ಯಾನಿಸಬೇಕೆಂದು ಧ್ಯಾನವಿಧಿಯನ್ನು ಮಾಡಿ ಆ ಧ್ಯೇಯತ್ವದ ಉಪಪಾದನವು ವಿವಾದವಿಷಯವಾದ ವಾಕ್ಯಗಳಿಂದ ಮಾಡಲ್ಪಡುತ್ತದೆ ಎಂಬುದು ಉಭಯಸಮ್ಮತವಾಗಿರುವುದರಿಂದ, ಈ ಪ್ರಕರಣವೆಲ್ಲಾ ಧ್ಯಾನವಿಧಿಪರವೆಂದು ಹೇಳಬೇಕಾಯಿತು. ಆ ಧ್ಯಾನದ ವಿಧಿಪರವಾದ ಪ್ರಕರಣಕ್ಕೆ ಶಿವಜಗತ್ಕಾರಣತ್ವ ವಿಧಿಪರತ್ವವನ್ನೂ ಹೇಳಿದರೆ ವಾಕ್ಯಭೇದವೆಂಬ ದೋಷವು ಬರುತ್ತದೆ. ಆದಕಾರಣದಿಂದ ಈ ವಾಕ್ಯದಿಂದಲೂ ಶಿವಜಗತ್ಕಾರಣತ್ವ ಸಿದ್ಧಿಯಾಗುವುದಿಲ್ಲ. ಪೂರ್ವೋಕ್ತ ರೀತಿಯಿಂದ ಈ ವಾಕ್ಯಕ್ಕೆ ಶಿವನಿಗೆ ಜಗತ್ಕಾರಣದಲ್ಲಿ ತಾತ್ಪರ್ಯವನ್ನು ಹೇಳಿದರೆ ನಾರಾಯಣಾದ್ಯುಪನಿಷತ್ತುಗಳ ವಿರೋಧವು ಬರುತ್ತದೆ. ಅದನ್ನು ಪರಿಹರಿಸುವುದಕ್ಕಾಗಿ ಅಲ್ಲಿರುವ ನಾರಾಯಣಾದಿ ಶಬ್ದಗಳಿಗೆ ಶಿವಪರತ್ವವನ್ನು ಹೇಳಬೇಕಾದರೆ ಆ ಪದಗಳಿಗೆ ಶಿವನಲ್ಲಿ ಲಕ್ಷಣಾಕಲ್ಪನಾದಿಗಳು ಅಶಕ್ಯವಾಗುತ್ತವೆ.

ಈ ದೋಷಗಳು ಸಹ್ಯವಲ್ಲವಾದಕಾರಣ ಈ ಅಥರ್ವಶಿಖೆಯ ವಾಕ್ಯವೂ ಕೂಡ ನಾರಾಯಣಪರವೇ ಎಂಬುದು ನ್ಯಾಯವು. ಹೇಗೆಂದರೆ ನಾರಾಯಣನು ಸರ್ವಶಬ್ದವಾಚ್ಯನೆಂದು ಪ್ರಮಾಣಸಿದ್ಧವಾದುದರಿಂದ ಶಿವಾದಿವಾಚಕವಾದ ಸಕಲಶಬ್ದಗಳೂ ರೂಢಿಯೋಗಗಳಿಂದ ನಾರಾಯಣವಾಚಕಗಳಾಗುತ್ತವೆ. ಲಕ್ಷಣಾದಿಕಲ್ಪನೆಯು ಅನಾವಶ್ಯಕವು. ಈ ಪ್ರಕರಣದಲ್ಲಿರುವ ಈಶಾನ-ಶಂಭು ಶಬ್ದಗಳು ವಿಷ್ಣುಪರವಾಗುವು-ದರಲ್ಲಿ ಬಂಧಕವೇನೂ ಇರುವುದಿಲ್ಲ. ಶಂಭುಶಬ್ದವು ನಾರಾಯಣಪರವಾದರೆ ನಾರಾಯಣನಿಂದ ವಿಷ್ಣುವಿಗೆ ಜನನವು ಈ ವಾಕ್ಯದಲ್ಲಿ ಹೇಳಲ್ಪಡುವುದು ಹೇಗೆ ಕೂಡುವುದೆಂಬುದೇ ಬಾಧಕವೆನ್ನಬೇಕು. ಅದು ಬಾಧಕವಲ್ಲ. ಮೂಲರೂಪಿಯಾದ ನಾರಾಯಣನ ದೆಸೆಯಿಂದ ಸೃಷ್ಟಿಸ್ಥಿತಿಲಯಗಳೆಂಬ ಕಾರ್ಯಗಳಿಗಾಗಿ ಬ್ರಹ್ಮವಿಷ್ಣುಮಹೇಶ್ವರರೆಂಬ ತ್ರಿಮೂರ್ತಿಗಳ ಪ್ರಾದುರ್ಭಾವವಾಯಿತು ಎಂದು ಭಾಗವತಾದಿ ಪುರಾಣ-ಗಳ ದೆಸೆಯಿಂದ ಸಿದ್ಧವಾಗುತ್ತದೆ. ಆದರೆ ಬ್ರಹ್ಮರುದ್ರರಲ್ಲಿ ಅಂತರ್ಯಾಮಿಯಾಗಿದ್ದು ಸೃಷ್ಟಿ , ಸಂಹಾರಗಳನ್ನು , ವಿಷ್ಣುರೂಪದಿಂದ ಸಾಕ್ಷಾತ್ತಾಗಿಯೇ ಪಾಲನವನ್ನು ಮಾಡುತ್ತಾನೆ ಎಂಬುದು ಅನೇಕಪ್ರಮಾಣಸಿದ್ಧವಾಗಿದೆ. ಮೂಲರೂಪದಿಂದ ಅವತಾರರೂಪದ ಪ್ರಾದು-ರ್ಭಾವವು ಶಾಸ್ತ್ರಸಿದ್ಧವಾದುದರಿಂದ ಯಾವ ಬಾಧಕವೂ ಇರುವುದಿಲ್ಲ.

ಹೀಗಾಗುವ ಪಕ್ಷದಲ್ಲಿ ಮೂಲರೂಪಿಯಾದ ಶಿವನಿಂದ ರುದ್ರನೆಂಬ ಅವತಾರವು ಆಯಿತೆಂದು ಶಿವಪಕ್ಷದವರು ಹೇಳಬಹುದಾದ ಕಾರಣ ರುದ್ರನಿಂದ ರುದ್ರನಿಗೆ ಉತ್ಪತ್ತಿಯು ಅಯುಕ್ತವೆಂದು ನೀವು ಹೇಳಿದುದು ಹೇಗೆ ಎಂದು ಕೇಳಬಹುದು. ನಮ್ಮ ಅಭಿಪ್ರಾಯವನ್ನು ಚೆನ್ನಾಗಿ ವಿವರಿಸುತ್ತೇವೆ. ಕೇಳಿರಿ- ನಾರಾಯಣನಿಗೆ ಸರ್ವಜಗತ್ಕಾರಣತ್ವ ವಿಷಯದಲ್ಲಿ ನಿರವಕಾಶವಾದ ಮೇಲೆ ಉದಾಹರಿಸಿದ ಪ್ರಮಾಣಗಳಿರುವಂತೆ, ಶಿವನಿಗೆ ಸರ್ವಜಗತ್ಕಾರಣತ್ವವಿಷಯದಲ್ಲಿಯೂ ನಿರವಕಾಶವಾದ ಒಂದು ಪ್ರಮಾಣವಾದರೂ ಇದ್ದರೆ, ಶಿವನಿಗೆ ಜಗತ್ಕಾರಣತ್ವವನ್ನೂ , ಸರ್ವೋತ್ತಮತ್ವವನ್ನೂ ಒಪ್ಪುವ ವಿಷಯದಲ್ಲಿ ನಮಗೆ ಎಷ್ಟುಮಾತ್ರವೂ ದ್ವೇಷವಿಲ್ಲ. ಅಂತಹ ಪ್ರಮಾಣಗಳು ಎಲ್ಲಿಯೂ ಕಾಣುವುದಿಲ್ಲ. ಮೇಲೆ ಉದಾಹರಿಸಿದ ಪ್ರಮಾಣಗಳು ಶಿವನಿಗೆ ಸಕಲಜಗತ್ಕಾರಣತ್ವವಿಷಯದಲ್ಲಿ ನಿರವಕಾಶವಾಗಿರುವುದಿಲ್ಲ. ಅಲ್ಲದೇ, ಅನೇಕ ಬಾಧಕಯುಕ್ತಗಳಾಗಿವೆ. ಪ್ರಮಾಣವಿಲ್ಲದೇ ಯಾವ ಅರ್ಥವನ್ನೂ ಒಪ್ಪುವುದು ಪರೀಕ್ಷಕರ ಧರ್ಮವಲ್ಲ. ನಾರಾಯಣಾದಿ ಶಬ್ದಗಳಿಂದ ಶಿವನ ಆರಾಧನೆಯು ಸೂತ್ರ ಸಂಹಿತೆಯಲ್ಲಿ ನಿಷೇಧಿಸಲ್ಪಟ್ಟಿದೆ. ಹಾಗೆ ಶಿವಾದಿ ಪದಗಳಿಂದ ವಿಷ್ಣುವಿನ ಆರಾಧನೆಯು ಕೂಡದೆಂದು ಎಲ್ಲಿಯೂ ಹೇಳಲ್ಪಟ್ಟಿರುವುದಿಲ್ಲ. (ಸೂ. ಸರ್ವಃ ಶರ್ವಃ ಶಿವಃ ಸ್ಥಾಣುಃ ಎಂದು ವಿಷ್ಣುಸಹಸ್ರನಾಮದಲ್ಲಿಯೂ ಇದೆ) ಈ ಹೇತುಗಳಿಂದ ನಾರಾಯಣನೇ ಬ್ರಹ್ಮರುದ್ರಾದಿ ಸಕಲ ಚೇತನಾಚೇತನಾತ್ಮಕವಾದ ಜಗತ್ತಿಗೆ ಆದಿಕರ್ತೃವೆಂತಲೂ, ನಾರಾಯಣನಿಂದ ಹುಟ್ಟಿದ ಬ್ರಹ್ಮನಿಂದ ಇತರ ಅವಾಂತರ ಸೃಷ್ಟಿಗಳು ಆದವೆಂದೂ, ಅಂತಹ ಅವಾಂತರಸೃಷ್ಟಿಗಳಲ್ಲಿ ಶಿವನು ವಿಷ್ಣ್ವಾಧೀನವಾಗಿ ಕೆಲವು ಸೃಷ್ಟಿಯನ್ನು ಮಾಡಿದುದಾಗಿಯೂ ಕೆಲವು ಪ್ರಮಾಣಗಳಿಗೆ ಅರ್ಥವೂ ಆಗಬಹುದೆಂದೂ, ನಾರಾಯಣನ ಅವತಾರರೂಪಗಳ ಪ್ರಾದುರ್ಭಾವವು ದಶರಥ-ವಾಸುದೇವಾದಿಗಳಿಂದ ಆದಂತೆ ಪ್ರಮಾಣವಿದ್ದ ಪಕ್ಷದಲ್ಲಿ ಶಿವನಿಂದೂ ಆಗಿರಬಹುದೆಂದು ಒಪ್ಪುವ ವಿಷಯದಲ್ಲಿ ಯಾವ ಪ್ರಮಾಣಕ್ಕೂ ಸಂಕೋಚವಾಗದೇ ಅರ್ಥಲಾಭವಾಗುವುದು.

ಶಿವನಿಗೆ ಸರ್ವಜಗತ್ಕಾರಣತ್ವವನ್ನು ಸರ್ವೋತ್ತಮತ್ವವನ್ನು ಹೇಳುವ ವಾದಿಗಳು ಶುದ್ಧಶೈವರು, ಅದ್ವೈತಿಗಳು ಎಂದು ಉಭಯವಿಧ-ರಾಗಿರುವರು. ಅವರಲ್ಲಿ ಮೊದಲನೆಯವರು, ಶಿವನೇ ಸರ್ವೋತ್ತಮನು; ಇತರದೇವತೆಗಳು ಶಿವನ ಅಧೀನರು, ಶಿವನಕ್ಕಿಂತಲೂ ಅಧಮರು ಎಂದು ಹೇಳುವರು. ಅವರ ಪಕ್ಷದಲ್ಲಿ ಶಿವವಾಚಕ ಪದಗಳಿಂದ ವಿಷ್ಣ್ವಾದಿಗಳ ಭಜನವು ಪುರುಷಾರ್ಥಸಾಧನವೇ ಹೊರತು ವಿಷ್ಣ್ವಾದಿ ಹೀನ ದೇವತೆಗಳ ನಾಮಗಳಿಂದ ಶಿವಭಜನವು ಪುರುಷಾರ್ಥಕ್ಕೆ ಸಾಧಕವಲ್ಲವೆಂಬುದಲ್ಲದೇ , ಅನರ್ಥಸಾಧಕವೂ ಆಗುತ್ತದೆ ಎಂದು ನಿರೂಪಿಸುವ ಸೂತಸಂಹಿತಾದಿಗಳಿಗೆ ಸ್ವಾರಸ್ಯವು ಬರುತ್ತದೆ. ಆದರೆ **ಶ್ರುತಿಸಾಮಂಜಸ್ಯವು ಬರುವುದಿಲ್ಲ.**

ಅದ್ವೈತಿಗಳು, ಶಿವನೇ ಸಕಲ ಜಗತ್ತಿಗೆ ಆದಿಕಾರಣನು ಸರ್ವೋತ್ತಮನು ಎಂದು ಭಾವಿಸಿ ವಿವಾದ ಮಾಡುವುದಕ್ಕೆ ಸರಿಯಾದ ಹೇತುವೇ ತೋರುವುದಿಲ್ಲ. ಅದ್ವೈತವಾದದಲ್ಲಿ ನಿರ್ಗುಣವು, ನಿರಾಕಾರವು ಆದ ಚೈತನ್ಯವು ಒಂದೇ ಸತ್ಯವು; ಶುದ್ಧಚೈತನ್ಯಭಿನ್ನವಾದುದು ಯಾವುದೂ ಸತ್ಯವಲ್ಲ , ಮಿಥ್ಯಾಭೂತವೆಂಬುದು ಪರಮಪ್ರಮೇಯವಾಗಿದೆ. ಆದುದರಿಂದ ವಿಷ್ಣು ,ಶಿವಾದಿ ನಾಮಗಳಿಂದ ಕರೆಯಲ್ಪಡುವ ವಿಶಿಷ್ಟ ಬ್ರಹ್ಮರೆಲ್ಲರೂ ಮಿಥ್ಯಾಭೂತರಾಗಿರಲಾಗಿ, ಶಿವನು ಸರ್ವೋತ್ತಮನಾಗುವುದರಿಂದ ಲಾಭವು, ಹರಿಸರ್ವೋತ್ತಮನಾಗುವುದರಿಂದ ನಷ್ಟವೂ ಕಾಣುವುದಿಲ್ಲ. ಮತಪ್ರವರ್ತಕರಾದ ಸಂಕರಾಚಾರ್ಯರು ಶೈವವೈಷ್ಣವಾದಿ ಸಂಪ್ರದಾಯಗಳನ್ನು ಸರ್ವವನ್ನು ಸಮಾನವಾಗಿ ತಿಳಿದು ಅದ್ವೈತ ಭಾವವನ್ನು ಮಾತ್ರ ಹೆಚ್ಚಾಗಿ ಜ್ಞಾತವ್ಯವೆಂದು ತಿಳಿಸಿರುವರು. ಮತ್ತು ಅವರು ರಚಿಸಿರುವ ಗೀತಾಭಾಷ್ಯಾದಿಗಳಲ್ಲಿ ' ಸ ಆದಿಕರ್ತಾ ನಾರಾಯ-ಣಾಖ್ಯೋ ವಿಷ್ಣುಃ' ಇತ್ಯಾದಿ ವಾಕ್ಯಗಳಿಂದ ನಾರಾಯಣನಿಗೆ ಆದಿಕರ್ತೃತ್ವವನ್ನು ಸ್ಪಷ್ಟಪಡಿಸಿರುವರು. ಹೀಗಿರುವಾಗ ಇವರಿಗೆ ಶಿವಸರ್ವೋತ್ತಮತ್ವ ಸಾಧನೆಯಲ್ಲಿಯೂ ವಿಷ್ಣುಸರ್ವೋತ್ತಮತ್ವ ನಿರಾಕರಣದಲ್ಲಿಯೂ ಅಭಿನಿವೇಶಕ್ಕೆ ಕಾರಣವೇ ಇರುವುದಿಲ್ಲ. ಸರ್ವದೇವತಾ ಚೈತನ್ಯಕ್ಕೂ ಅಭೇದ ವಿರುವುದರಿಂದ ಯಾವ ಪಕ್ಷದಲ್ಲಿಯೂ ಅಭಿಮಾನಮಾಡದೇ ಉದಾಸೀನರಾಗಿರುವುದು ಉಚಿತವು. ಶ್ರುತ್ಯರ್ಥಗಳನ್ನು ಮೀಮಾಂಸಾ-ನ್ಯಾಯಗಳ ಅನುಸಾರದಿಂದ ವಿಚಾರ ಮಾಡಿದರೆ, ಇದುವರೆಗೂ ನಾವು ತೋರಿಸಿರುವ ಮಾರ್ಗದಿಂದ ವಿಷ್ಣುಸರ್ವೋತ್ತಮತ್ವಕ್ಕೆ ಅನುಕೂಲ್ಯವಿದೆ ಎಂಬುದೂ, ಶಿವಸರ್ವೋತ್ತಮತ್ವಕ್ಕೆ ಬಾಧಕಗಳಿವೆ ಎಂಬುದೂ ಸ್ಪಷ್ಟವಾಗಿರುವುದು.

ಹಾಗಿದ್ದರೂ, ಇತಿಹಾಸ ಪುರಾಣಾದಿಗಳಿಂದ ವೇದಾರ್ಥವನ್ನು ತಿಳಿಯಬೇಕೆಂದು ವಚನಗಳಿರುವುದರಿಂದ, ಶಿವಪುರಾಣಾದಿಗಳು ಶಿವನಿಗೆ ಸಕಲಜಗತ್ಕಾರಣತ್ವಕ್ಕೂ ಸರ್ವೋತ್ತಮತ್ವಕ್ಕೂ ಸಾಧಕಗಳಾಗಿವೆ. ಆದುದರಿಂದ ತದನುಸಾರವಾಗಿ ವೇದವಚನಗಳಿಗೆ ಅರ್ಥವನ್ನು ಹೇಳುವುದಾದರೆ, ವಿಷ್ಣುವಿಗೆ ಸರ್ವಜಗತ್ಕಾರಣತ್ವವು ಸರ್ವೋತ್ತಮತ್ವವೂ ಸಿದ್ಧವಾಗುವುದಿಲ್ಲ ಎಂದು ಹೇಳಬಹುದು. ಆದರೆ ಚೆನ್ನಾಗಿ

ವಿಚಾರಮಾಡಿದಲ್ಲಿ ಆ ಆಶೆಯು ಸಫಲವಾಗುವುದಿಲ್ಲ. ಏಕೆಂದರೆ-ಪುರಾಣಗಳು ಕೆಲವು ವಿಷ್ಣುವೇ ಸರ್ವಜಗತ್ಕಾರಣನೆಂದೂ, ಕೆಲವು ಶಿವನೇ ಸರ್ವಜಗತ್ಕಾರಣನೆಂದೂ, ಇನ್ನೂ ಅನೇಕವಿಧವಾಗಿಯೂ ನಿರೂಪಿಸುತ್ತವೆ. ಅದರಲ್ಲಿ ಯಾವ ಪುರಾಣವನ್ನು ಅಂಗೀಕರಿಸಿ ಯಾರಿಗೆ ಸರ್ವೋತ್ತಮತ್ವವನ್ನು ಒಪ್ಪುವುದು ಉಚಿತವೆಂಬುದು ಕೂಡ ವಿಚಾರದಿಂದ ನಿರ್ಣಯಿಸತಕ್ಕ ವಿಷಯವಾಗಿದೆ. ಅಂತಹ ನಿರ್ಣಯಕ್ಕೆ ಉಪಾಯವನ್ನು ಪುರಾಣಕರ್ತೃಗಳೇ ಹೇಳಿದ್ದರೆ ಅವು ಸರ್ವರಿಂದಲೂ ಅಂಗೀಕರಿಸಲರ್ಹವಾಗಿರುವುದು. ಅವರವರು ಸ್ವತಂತ್ರವಾಗಿ ಕಲ್ಪಿಸುವ ಉಪಾಯಗಳು ಶ್ರದ್ಧೇಯವಲ್ಲ. ಪುರಾಣಗಳಲ್ಲಿಯೇ ಉಕ್ತವಾಗಿರುವ ರೀತಿಯಿಂದ ನಿರ್ಣಯಮಾಡುವುದಕ್ಕೆ ಯತ್ನಿಸಿದ ಪಕ್ಷದಲ್ಲಿಯೂ ವಿಷ್ಣುಪಕ್ಷಕ್ಕೆ ಅನುಕೂಲವಿದೆಯೇ, ಹೊರತು ಶಿವಾದಿಪಕ್ಷಕ್ಕೆ ಅನುಕೂಲವಿಲ್ಲವಿರುವುದೆಂಬುದು ಮುಂದೆ ವಿಶದಪಡಿಸಲ್ಪಡುತ್ತದೆ.

ಈಗ , ಮಹಾನುಭಾವರು ವಿವಾದಪೂರ್ವಕವಾಗಿ ಮಾಡಿರುವ ನಿರ್ಣಯವನ್ನೇ ತೋರಿಸುವೆವು. ನೋಡಿರಿ. ಭಾಗವತ ದಶಮಸ್ಕಂಧ ದಲ್ಲಿ 'ಸರಸ್ವತೀ ನದಿಯ ತೀರದಲ್ಲಿ ಸತ್ರಯಾಗವನ್ನು ಮಾಡುತ್ತಿರುವಾಗ, ಬ್ರಹ್ಮ-ವಿಷ್ಣು-ಮಹೇಶ್ವರರೆಂಬ ತ್ರಿಮೂರ್ತಿಗಳೊಳಗೆ ಯಾರು ಸರ್ವೋತ್ತಮರೆಂಬ ವಿಷಯವನ್ನು ಕುರಿತು ಋಷಿಗಳಲ್ಲಿ ಪರಸ್ಪರವಿವಾದವು ಸಂಭವಿಸಿತು. ಆಗ, ಭೃಗುಋಷಿಗಳು ತಾವು ಈ ವಿಷಯವನ್ನು ವ್ಯವಸ್ಥೆ ಮಾಡಿಕೊಡುವೆವೆಂದು ಒಪ್ಪಿಕೊಂಡರು. ಅದೇ ಪ್ರಕಾರ ತ್ರಿಮೂರ್ತಿಗಳ ಸ್ಥಾನಗಳಿಗೆ ಹೋಗಿ ಪರೀಕ್ಷಿಸುವಲ್ಲಿ **ಬ್ರಹ್ಮರುದ್ರರಲ್ಲಿ ದೋಷಗಳು ಕಂಡುಬಂದುದಾಗಿಯೂ, ವಿಷ್ಣುವಿನಲ್ಲಿ ಯಾವದೋಷವೂ ಕಂಡುಬರದೇ ಹೋದುದಲ್ಲದೇ, ಸಮಸ್ತಗುಣಗಳೂ ಇವೆಯೆಂದೂ ಕಂಡುಬಂದುದಾಗಿಯೂ, ಆದುದರಿಂದ ವಿಷ್ಣುವೇ ಸರ್ವೋತ್ತಮನೆಂಬುದಾಗಿಯೂ** ಭೃಗುಋಷಿಗಳು ತಿಳಿಸಿದ ಪ್ರಕಾರವಾಗಿ ಋಷಿಗಳೆಲ್ಲರೂ ಸಮಾಧಾನಪಟ್ಟರು.' ಎಂದು ಸ್ಪಷ್ಟವಾಗಿ ನಿರೂಪಿತವಾಗಿದೆ. ಇಂತಹ ಮಹಾತ್ಮರ ನಿರ್ಣಯಕ್ಕಿಂತಲೂ ಬೇರೇ ನಿರ್ಣಯವು ಅನಾವಶ್ಯಕವಲ್ಲವೇ?

॥ ಇತಿ ಶಂ ॥ ಶ್ರೀಗುರುಮಧ್ವೇಶಾರ್ಪಣಮಸ್ತು॥

ಶ್ರೀರಾಯಪಾಳ್ಯರಾಘವೇಂದ್ರಾಚಾರ್ಯರಿಗೆ ಅವರಅಂತರ್ಗತ ಶ್ರೀಮಧ್ವಾಂತರ್ಯಾಮಿನ್ ಶ್ರೀಕೃಷ್ಣನಿಗೆ ಅವನ ಭೃತ್ಯರುಗಳಿಗೆ ನಮಸ್ಕಾರಗಳು.

ಶ್ರೀರಾಘವೇಂದ್ರಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ

ಶ್ರೀಹನುಮದ್ಭೀಮಸುಮದ್ವಹಂಸಾಂತರ್ಯಾಮಿನ್ ಶ್ರೀ ಲಕ್ಷ್ಮೀಹಯಗ್ರೀವಾತ್ಮಕ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀಮುಖ್ಯಪ್ರಾಣಾವತಾರಿ ಶ್ರೀಮಧ್ವರಾಜವಶೇತ್ಸರ್ವಂ। ಸ ವಿಷ್ಣೋರ್ವಶಗಃ ಸದಾ ॥

**ಭಾರತೀರಮಣೋಮಧ್ವೋಸೃಷ್ಟಿಸ್ಥಿತ್ಯಂತಕಾರಕಃ ।**

**ವಾಸುದೇವಾಜ್ಞಯಾ ನಿತ್ಯಂ ದುಷ್ಟಾನಾಂ ಪ್ರಾಣಘಾತಕಃ ॥**

**ಶರ್ವಾದಿಸರ್ವಗೀರ್ವಾಣನಿರ್ವಾಣಗತಿಹೇತವಃ ।**

**ಪೂರ್ಣಪ್ರಜ್ಞಪದಾಂಭೋಜಪಾಂಸವಃ ಪಾಂತು ನಃ ಸದಾ ॥**

(ಈ ಪುಸ್ತಕವನ್ನು ಮಾಧ್ವಬಾಂಧವರಿಗಾಗಿ ಗಣಕೀಕರಿಸಲಾಗಿದೆ. ತಪ್ಪುಗಳಿದ್ದಲ್ಲಿ ಕ್ಷಮೆ ಇರಲಿ. ತಿದ್ದಲು ಸೂಚನೆ ಕೊಡಿ.)

Email:- anandsib@vsnl.com